ಗೋರ್ ಬೋಲಿ

ಬಂಜಾರಾ ಸಂಸ್ಕೃತಿ ಮತ್ತು ಭಾಷಾನಿಘಂಟು



ಪ್ರೊ. ಶಿರಗಾನಹಳ್ಳಿ ಶಾಂತನಾಯ್ಕ

ಗೋರ್ ಬೋಲಿ - ಬಂಜಾರಾ
ಸಂಸ್ಕೃತಿ ಮತ್ತು ಭಾಷಾ ನಿಘಂಟು

ಪ್ರೊ. ಶಿರಗಾನಹಳ್ಳಿ ಶಾಂತನಾಯ್ಕ

ಪ್ರಕಾಶಕರು
ಅನಿಕೇತನ ಪ್ರಕಾಶನ
5ನೇ ಮೇನ್, 4ನೇ ಕ್ರಾಸ್, ವಿಷ್ಣುವರ್ಧನ ಪಾರ್ಕ್,
ಬಳ್ಳಾರಿ

GOARBOLI - BANJARA CULTURE AND LANGUAGE DICTIONARY - Prof. N. Shanthanaik
Published by - Aniketan Prakashana, Dr. G. Dakshayani Kuvempunagar, 5th Main, 4th Cross, Near Vishnuvardhan Park, Ballari.

First Edition : 2019

Pages : 176

Price : Rs.100/-

Copies : 1000

Paper Used : Delta Maplitho

Printed at
Udayaravi Offset Printers
1354/1, 4th Cross, K. M. Puram, Mysore -4
Mob. : 9448382971

ಮುನ್ನುಡಿ

ಬಂಜಾರ ಭಾಷೆ ಇಂಡೋ ಯುರೋಪಿಯನ್ ಭಾಷಾ ಪ್ರಭೇದಕ್ಕೆ ಸೇರಿರುವ ಭಾಷೆಯಾಗಿದ್ದು, ಈ ಭಾಷೆಯಲ್ಲಿ ಹಿಂದಿ, ಮರಾಠಿ, ಕೊಂಕಣಿ, ಖಡಿಬೋಲಿ, ಅಪಭ್ರಂಶ, ರಾಜಸ್ಥಾನಿ, ಗುಜರಾತಿಯ ಅನೇಕ ಶಬ್ದಗಳು ಒಳಗೊಂಡಿರುವುದು ಕಂಡು ಬರುತ್ತದೆ. ಮೂಲತಃ ರಾಜಸ್ಥಾನದಿಂದ ವಲಸೆ ಬಂದಿರುವ ಬಂಜಾರ ಸಮುದಾಯದ ಸಂಸ್ಕೃತಿ ಭಾಷೆ, ಸಾಹಿತ್ಯ ಹಾಗೂ ಜನಾಂಗೀಯ ಇತಿಹಾಸ ದಾಖಲಾಗದೆ ಇರುವುದು ಈ ದೇಶದ ದೊಡ್ಡ ದುರಂತಗಳಲ್ಲಿ ಒಂದು.

ಭಾರತದ ಎಲ್ಲಾ ರಾಜ್ಯಗಳಲ್ಲಿ ಹರಿದು ಹಂಚಿಹೋಗಿರುವ ಈ ಜನಸಮುದಾಯ ಇಂದಿಗೂ ತನ್ನ ಭಾಷೆ ಮತ್ತು ಸಂಸ್ಕೃತಿಯೊಂದಿಗೆ ಬದುಕಿರುವುದು ಅಚ್ಚರಿಯೇ ಸರಿ. ಒಂದು ಕಡೆ ಸ್ಥಳೀಯ ಭಾಷೆಯ ಪ್ರಭಾವ, ಎರಡನೆಯದಾಗಿ ಜಾಗತಿಕ ಭಾಷೆಯ ಒತ್ತಡ ಮತ್ತು ಒತ್ತಾಯದ ನಡುವೆ ತನ್ನತನವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ರಾಜ್ಯಭಾಷೆಗಳ ನಡುವೆ ಫಿನಿಕ್ಸ್ ಹಕ್ಕಿಯಂತೆ ಮರುಜೀವ ಪಡೆಯುತ್ತ ಬೆಳೆಯುತ್ತಿರುವ ಗೋರ್ ಬೋಲಿ, ಗೋರ್ ಬಂಜಾರರ ಭಾಷೆಯಾಗಿದೆ. ಆದರೆ ಗಂಡಾಂತರ ಎಲ್ಲಿದೆ ಎಂದರೆ ಸ್ವತಃ ಮೂಲನಿವಾಸಿಗಳಾದ ರಾಜಸ್ಥಾನಿಗಳೆ ಹಿಂದಿಯ ಪ್ರಾಬಲ್ಯಕ್ಕೆ ಒಳಗಾಗಿ ರಾಜಸ್ಥಾನ ಭಾಷೆ ಬಿಟ್ಟು, ಹಿಂದಿಯನ್ನು ಕಲಿಯುತ್ತಿರುವ ಈ ಸಂದರ್ಭದಲ್ಲಿ ಬಂಜಾರರು ಸ್ಥಳೀಯ ಭಾಷೆಗಳ ಕಲಿಕೆಯಿಂದಾಗಿ ಗೋರ್‌ಬೋಲಿಯಿಂದ ವಂಚಿತರಾಗುತ್ತಿದ್ದಾರೆ. ಇನ್ನು ತಾಂಡಗಳಿಂದ ವಲಸೆ ಬಂದಿರುವ ಬಂಜಾರರು ಉದ್ಯೋಗದ ಅವಕಾಶ ಮತ್ತು ಹೊಸ ಸಂಸ್ಕೃತಿಯ ಆಕರ್ಷಣೆಯಿಂದಾಗಿ ಭಾಷೆಯನ್ನು ನಿರ್ಲಕ್ಷಿಸಿರುವುದು ಮತ್ತೊಂದು ಆಘಾತಕಾರಿ ಬೆಳವಣಿಗೆ. ಜಗತ್ತಿನ ಬಹುತೇಕ ಭಾಗಗಳಲ್ಲಿ ಕಾಣಸಿಗುವ ಬಂಜಾರರಿಗೆ ಎರಡು–ಮೂರು ಭಾಷೆಗಳಲ್ಲಿ ಪ್ರಭುತ್ವ ಸಾಧಿಸುವ ಅನಿವಾರ್ಯತೆ ಉಂಟಾಗಿದೆ. ಆದರೆ ಕೇವಲ ಸಮುದ್ರ ಕಿನಾರೆಯಲ್ಲಿ ಬದುಕಿರುವ ಕೆಲವು ಕೊಂಕಣಿಗರು, ಅಧಿಕಾರದ ಪ್ರಾಬಲ್ಯದಿಂದ ಕೊಂಕಣಿಯನ್ನು ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸಿದ್ದು, ಅವರಿಗಿಂತ 100 ಪಟ್ಟು ಹೆಚ್ಚಿನ ಸಂಖ್ಯೆಯಲ್ಲಿರುವ ಬಂಜಾರರ ಭಾಷೆ ಗೋರ್‌ಬೋಲಿಯನ್ನು ಸರ್ಕಾರಗಳು ಉಪೇಕ್ಷಿಸಿವೆ. ಯಾವ ಅಕಾಡೆಮಿಗಳು, ಸರ್ಕಾರಗಳು ಮನ್ನಣೆ ನೀಡದೆ ತಮ್ಮನ್ನು ತಾವೇ ನಿರ್ವಂಚಿಸಿಕೊಳ್ಳುತ್ತಿವೆ. ಈ ಹಿನ್ನೆಲೆಯಲ್ಲಿ ಭಾರತೀಯ ಭಾಷಾ ಸಂಸ್ಥಾನ, ಮೈಸೂರು ಬಂಜಾರ ಭಾಷೆ ನಿಘಂಟನ್ನ ಮುದ್ರಿಸಲು ಧನಸಹಾಯ ನೀಡಿರುವುದು ಎಲ್ಲೋ ಒಂದು ಸಣ್ಣ ಭರವಸೆಯನ್ನು ಉಂಟು ಮಾಡಿದೆ.

ಶತಮಾನಗಳಿಂದಲೂ ಸ್ವಾಭಿಮಾನದ ಬದುಕನ್ನು ಬದುಕುತ್ತಾ ಬಂದಿರುವ ಬಂಜಾರ ಸಮುದಾಯ ತನ್ನ ಸಂಸ್ಕೃತಿಯನ್ನು ಇದ್ದಂತೆ ಉಳಿಸಿಕೊಂಡು ಬಂದಿರುವುದು ದೊಡ್ಡ ಹೆಮ್ಮೆಯ ಸಂಗತಿ ಒಂದುಕಡೆಯಾದರೆ, ಜಾಗತೀಕರಣ, ಭಾಷಾವ್ಯಾಮೋಹ, ನಗರೀಕರಣ ಮತ್ತು ಸಂಸ್ಕೃತಿಯ ಪಲ್ಲಟದ ಭರಾಟೆಯಲ್ಲಿ ಅಸ್ಥಿತ್ವ ಕಳೆದುಕೊಳ್ಳುತ್ತಿರುವುದು ವಿಪರ್ಯಾಸವೆ ಸರಿ. ನಾನು ಈಗಾಗಲೆ ಹೇಳಿರುವಂತೆ ಸಣ್ಣ ವ್ಯಾಪಾರಿಗಳಾಗಿದ್ದ ಲಂಬಾಣಿಗರು ಮೂಲತಃ ದಕ್ಷಿಣ ಭಾರತೀಯರಲ್ಲ, ರಾಜಸ್ಥಾನ, ಗುಜರಾತ್, ದೆಹಲಿ,

ಪಂಜಾಬ್ ಪ್ರದೇಶಗಳಲ್ಲಿ ಹೆಚ್ಚು ವಾಸವಾಗಿದ್ದ ಬುಡಕಟ್ಟು ಇದಾಗಿದ್ದು ತನ್ನದೇ ಆದ ಲಿಪಿಯನ್ನು ಹೊಂದಿಲ್ಲದಿದ್ದರೂ ಮೌಖಿಕ ಪರಂಪರೆಯಿಂದಲೆ ಕ್ರಿಸ್ತಪೂರ್ವದಿಂದ ಆರಂಭವಾಗಿರುವ ಬಂಜಾರ ಬುಡಕಟ್ಟು ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿಕಂಡು ಬಂದಿದೆ. ಮೂರುನಾಲ್ಕು ಭಾಷೆಗಳ ಸಮೂಹ ಮತ್ತು ಅನುಕರಣೆ ಶಬ್ಧಗಳು ಇದರಲ್ಲಿ ಬರುವುದರಿಂದ ಇದರ ಸ್ಪಷ್ಟವಾದ ವ್ಯಾಕರಣ ಯಾವುದು ಎಂದೆ ತಿಳಿಯುವುದಿಲ್ಲ. ದೇವನಾಗರಿ ಭಾಷಾಪ್ರಭೇಧಗಳಿಗೆ ಸಾಕಷ್ಟು ಹತಿರವಿರುವುದರಿಂದ ಹೆಚ್ಚು ಕಡಿಮೆ ದೇವನಾಗರಿಯನ್ನು ಮಾದರಿಯಾಗಿಟ್ಟುಕೊಂಡಿರುವುದು ಉಂಟು. ಭಾರತದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿರುವ ಬಂಜಾರರುಗಳ ಸ್ಥಿತಿ ಆರ್ಥಿಕವಾಗಿ ಹದಗೆಟ್ಟಿದ್ದರು, ಸ್ವಾಭಿಮಾನದ ಬದುಕನ್ನು ಬದಿಕಿದ್ದಾರೆ. ಆದರೆ ಕುಡಿತ ಮತ್ತು ಮಾಂಸದ ಮೇಲಿನ ವ್ಯಾಮೋಹ ಹೋಗದೆಯಿರುವುದು ಕಂಡಕ್ಕೆ, ತುಂಡಿಗೆ ಮತ್ತು ಸಾರಾಯಿಗೆ ತಮ್ಮ ಇಡಿಜೀವಿತದ ಹಣವನ್ನು ಸುರಿದು ಖಾಲಿಯಾಗಿದ್ದಾರೆ, ಮಕ್ಕಳನ್ನು ಮಾರುವ ಪೀಡೆಗೆ ತೊಡಗಿಕೊಂಡಿದ್ದಾರೆ, ಹಾಗಾಗಿಯೆ ಇವರು ಅಕ್ಷರ ಲೋಕದಿಂದ ಬಹಳ ದೂರ ಉಳಿದಿದ್ದರು. ಈಗ ಅವರು ನಿಧಾನವಾಗಿಯಾದರು ಬಹಳ ತೀವ್ರವಾಗಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಯಾವ ಬಂಜಾರ ವಿದ್ಯಾರ್ಥಿಯು ಹೆದರಿಸುವ, ದಬ್ಬಾಳಿಕೆ ಮಾಡುವ ಪ್ರವೃತ್ತಿಯನ್ನು ರೂಡಿಸಿಕೊಡಿಲ್ಲ. ವಿನಮ್ರತೆ, ಶಾಂತಿ, ತಾಳ್ಮೆಯಿಂದ ಕೊಟ್ಟದನ್ನು ಊಟವಮಾಡಿ, ಹಕ್ಕೊತ್ತಾಯದಂತಹ ಪ್ರವೃತ್ತಿಯಿಂದ ದೂರ ಉಳಿದು ಸಾದಿಸುತ್ತಾರೆ.ಹಾಗಾಗಿ ಅವರ ಭಾಷೆಯ ಬಗ್ಗೆ ಮತ್ತು ಈಗ ಉಂಟಾಗಿರುವ ಮೀಸಲಾತಿ ರಾಜಕಾರಣದ ಸ್ಥಿತ್ಯಂತರವನ್ನು ಗಮನಿಸುವುದು ಅನಿವಾರ್ಯವಾಗಿದೆ. ಹೊಸಲೋಕದ ಒಳಪ್ರವೇಶವನ್ನು ಹಳೆಯ ಭಾಷೆ, ಸಂಸ್ಕೃತಿಯನ್ನು ಇಟ್ಟುಕೊಂಡೆ ಮಾಡುವುದು ಇವತ್ತಿನ ಅನಿವಾರ್ಯವಾಗಿದೆ. ಹೊಸ ಎಕ್ಸಟೇನ್ಷನ್ ಪ್ರದೇಶಗಳಲ್ಲಿ ತಾವು ಹುಟ್ಟಿದ ತಾಂಡಗಖನ್ನು ಸಂಸ್ಕೃತಿ,ಭಾಷೆಯನ್ನು ಮರೆತು ನೆಲೆಸುತ್ತಿರುವ ಬಂಜಾರರಿಗೆ ಅವರ ಭಾಷೆ ಉಳಿಸುವುದು ಇವತ್ತಿನ ಜರೂರತ್ತಾಗಿದೆ. ಗೋರ್ ಬೋಲಿ ಒಂದು ಎಕ್ಸಕ್ಲೂಸಿವ್ ಭಾಷೆಂಯಾಗಿದ್ದು ಕೇವಲ ತಾಂಡಗಳಿಗೆ ಮಾತ್ರ ಸೀಮಿತವಾಗಿರುವ ಭಾಷೆಯಾಗಿರುವುದರಿಂದ ಅದರ ವಿಕಾಸವಾಗಿಲ್ಲ. ಯಾವುದೆ ಭಾಷೆಯ ಬೆಳವಣಿಗೆ ಕೇವಲ ಇನ್‌ಕ್ಲೂಸಿವ್‌ನೆಸ್‌ನಿಂದ ಮತ್ತು ಅಕ್ಸೆಪ್ಟ್‌ಟೆ ಬಲಿಟಿಯಿಂದ ಮಾತ್ರ ಸಾಧ್ಯ. ಆದ್ದರಿಂದ ಗೋರಬೊಲಿಯಲ್ಲಿ ತಮ್ಮ ಜನಾಂಗದವರನ್ನು ಮಾತ್ರ ಗುರುತಿಸುವ ಮತ್ತು ಹೊರ ಪ್ರಪಂಚವನ್ನು ದೂರಿಕರಿಸುವ ಪ್ರಬಲವಾದ ಆಸ್ಥೆ ಇದೆ , ಉದಾಹರಣೆಗೆ 'ಗೋರಮಾಟಿ' ಎನ್ನುವ ಶಬ್ದ ಕೇವಲ ಬಂಜಾರರಿಗೆ ಮಾತ್ರ ಬಳಕೆಯಾಗುತ್ತದೆ. ಹೊರಗಿನವರನ್ನು ಈ ಪ್ರಕಾರದಲ್ಲಿ ಕರೆಯಲಾಗುತ್ತೆ.

ಗೋರ್ – ಕೋರ್

ತಾಂಡ್ರಿ - ಕೋರಿ

ಭೋರಿ –ಕೊಂಡಿ

ಭೋರ – ಕೂಂಡಾ

ಹೀಗೆ ಹೊರಗಿನ ಜಗತ್ತಿಗೆ ತೆರೆದುಕೊಳ್ಳದೆ ಕೇವಲ ಭಟ್ಟಿಸಾರಾಯಿ, ವರ್ಷಕೊಂದರಂತೆ ದೇವರ ಹೆಸರಿನಲ್ಲಿ ಹಬ್ಬ ಮಾಡುವ ಬಂಜಾರರು ತಾಂಡದೊಳಗೆ

ನೆಲೆಸಿದ್ದು ಸದ್ಯಕ್ಕೆ ಅವರೇ ಬಂಜಾರ ಸಂಸ್ಕೃತಿಯ ವಾರಸುದಾರರಾಗಿದ್ದಾರೆ. ಬೇರೆ ಭಾಷೆಗಳಂತೆ ಲಿಂಗ ಸಂಬೋದನೆ ಇದ್ದು ತಾಂಡ್ರಿ (ಸ್ತ್ರೀ), ತಾಂಡ್ರೊ (ಪು), ಭಾಟ(ನ) ರೂಢಿಯಲ್ಲಿದ್ದು ನಪಂಸಕ ಲಿಂಗದ ಬಳಕೆ ಹೆಚ್ಚಾಗಿಯಾಗುವುದಿಲ್ಲ. ಏಕೆಂದರೆ ಭಾರತಿಯ ಅನೇಕ ಭಾಷೆಗಳ ಶಬ್ದಜೋಡಣೆ ಈ ಭಾಷೆಯ ಮೇಲೆ ಪ್ರಭಾವ ಬೀರಿರುವ ಹಿನ್ನೆಲೆಯಲ್ಲಿ ಏಕವಚನ ಮತ್ತು ಬಹುವಚನದ ಶಬ್ದಗಳು ಅನೇಕ ಸಂದರ್ಭಗಳಲ್ಲಿ ಶಬ್ದಗಳಿಗೆ ಏಕವಚನ-ಬಹುವಚನದಂತೆ ಬಳಕೆಯಾಗುತ್ತದೆ. ಉದಾಹರಣೆಗೆ

ಏಕವಚನ	ಬಹುವಚನ
ಬೇಂಸಿ (ಒಂದು)	ಬೇಂಸಿ (ಹಿಂಡು)
ಬಳದ (ಒಂದು)	ಬಳದ (ಹಿಂಡು)
ತಾಂಡ್ರಿ (ಒಬ್ಬಳು)	ತಾಂಡ್ರಿ (ಹಿಂಡು)
ಮರ್ದ (ಒಬ್ಬನು)	ಮರ್ದ (ಹಿಂಡು)

ಘೋರ್ ಇದಕ್ಕೆ ಏಕವಚನವೇ ಬಹುವಚನವಾಗಿ ಮಾರ್ಪಡುವ ಅನೇಕ ಸಾಧ್ಯತೆಗಳಿವೆ. ಹಾಗಾಗಿ ಇದೊಂದು ವಿಶಿಷ್ಟ ಮತ್ತು ವಿಚಿತ್ರವಾದ ಭಾಷೆಯಾಗಿದೆ. ರೂಢಿನಾಮಗಳು, ಅನ್ವರ್ಥಕನಾಮಗಳು, ದಕ್ಷಿಣ ಮತ್ತು ಉತ್ತರ ಭಾರತದ ಭಾಷೆಗಳಲ್ಲಿರುವಂತೆ ಇವೆ. ವಾಕ್ಯ ರಚನೆಯು ಕೂಡ ಅನ್ಯ ಭಾಷೆಗಳಲ್ಲಿರುವಂತೆ ಕಂಡುಬರುತ್ತವೆ.

ವಸ್ತು ಕ್ರಿಯೆ – ಕರ್ತೃ ಕ್ರಿಯೆ

ಖಾಣೊ ಖಾದೊ – ಊಟ ಆಯಿತ

ಆದರೆ ಈಭಾಷೆಯ ವಿಶಿಷ್ಟವೆಂದರೆ ಬೆರಳೆಣಿಕೆಯಷ್ಟು ಶಬ್ಧಗಳನ್ನು ಉಳಿಸಿಕೊಂಡಿರುವುದು ಮತ್ತು ಈ ಭಾಷೆಯನ್ನು ಮಾತನಾಡುವರು ಸಂಪೂರ್ಣವಾಗಿ ಪ್ರಾದೇಶಿಕ ಭಾಷೆಯನ್ನು ಕಲಿಯಬೇಕಾದ ಅನಿವಾರ್ಯವಿರುವುದರಿಂದ ಪ್ರಾದೇಶಿಕ ಭಾಷೆಯ ಪ್ರಭಾವ ಯಥೇಚ್ಚವಾಗಿ ಕಂಡುಬರುತ್ತದೆ. ಈಗಂಡಾಂತರವೆ ಗೋರ್ ಬೋಲಿಯ ಅಳಿವಿಗೆ ನಾಂದಿಯನ್ನು ಹಾಡುತ್ತಿರುವುದು ಎಂಬುದು ನನ್ನ ಅಭಿಪ್ರಾಯ ವಾಗಿದೆ. ಏಕೆಂದರೆ ಈಗಾಗಲೇ ಉತ್ತರ ಪ್ರದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವ ಬಂಜಾರರು ಸಂಪ್ರದಾಯ, ಭಾಷೆ, ಸಂಸ್ಕೃತಿಯನ್ನು ಮರೆತ್ತಿದ್ದಾರೆ, ಹಾಗೂ ಬುಡಕಟ್ಟು ಆಸ್ಮಿತೆಯನ್ನು ಕಳೆದುಕೊಂಡು, ಹೊಸ ಸಂಸ್ಕೃತಿಯತ್ತ ಆಕರ್ಷಿತರಾಗಿದ್ದಾರೆ. ಕೆಲವೆ ಬೆರಳೆಣಿಕೆಯಷ್ಟು ಬಂಜಾರಿಗೆ, ಗೋರ್‌ಬೋಲಿ ಒಂದು ಭಾಷೆ ಎಂಬುದು ಅರಿವಾಗುತ್ತದೆ. ಆದಕಾರಣ ಈ ನಿಘಂಟು ಕೇವಲ ಒಂದು ಪ್ರಯತ್ನ. ಸಾವಿರಾರು ಪುರಾತನ ಶಬ್ಧಗಳು ಅರ್ಥವನ್ನೆ ಕಳೆದುಕೊಂಡಿವೆ. ಉದಾಹರಣೆಗೆ ಪ್ರಾದೇಶಿಕ ಪ್ರಭಾವದಿಂದಾಗಿ ಉತ್ತರ ಪ್ರದೇಶದ ಬಂಜಾರರು ಮದುವೆಯಲ್ಲಿ ಬಳಸುವ ಯಾವ ಸಂಪ್ರದಾಯಗಳನ್ನು ಬಳಸುವುದಿಲ್ಲ. ವಿಯಾರಹಾಟ್, ಸಾಡಿತಾಣೇರೊ, ಘೋಟಘೋಳೆರೊ, ವೆತಡೂನಕಾಡೇರೊ, ಧಾವಲೊ ಇತ್ಯಾದಿಗಳು ಮಾಯವಾಗಿ, ಕುದುರೆಯ ಮೇಲೆ

ಬಾರಾತಿ ಬರುವುದು ಹಿಂದೂ ಸಂಪ್ರದಾಯದಂತೆ ಮದುವೆಯಾದರೆ ಮುಗಿಯಿತು. ಈ ದುರಂತಗಳಿಗೆ ಸಿಲುಕಿ ಗೋರ್‌ಬೋಲಿ ಸಂಪೂರ್ಣವಾಗಿ ಸರ್ವನಾಶವಾಗಿದೆ. ಈ ಹಿನ್ನೆಲೆಯಲ್ಲಿ ಈಡಿ ಭಾರತದಾದ್ಯಂತ ಬಂಜಾರರು ಭಾಷೆ ಮತ್ತು ಸಂಸ್ಕೃತಿಯ ಮೇಲಿನ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತಿದ್ದಾರೆ. ಕಳೆದು ಹೋಗುತ್ತಿರುವ ಸಂಸ್ಕೃತಿಯನ್ನು ಉಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ, ಮಹಾರಾಷ್ಟ್ರದಲ್ಲಿ ವಾಸವಾಗಿರುವ ಬಂಜಾರರು ಮರಾಠಿಯನ್ನೆ ಹೆಚ್ಚು ಬಳಸುವುದರೊಂದಿಗೆ ಬಹುತೇಕ ಮರಾಠಿಗರೇ ಆಗಿದ್ದಾರೆ. ಒಮ್ಮೆ ದೆಹಲಿಯಲ್ಲಿ ನನ್ನೊಂದಿಗೆ ಒಂದು ತಿಂಗಳು ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗಿಯಾಗಿದ್ದ ಬಂಜಾರ ಹುಡುಗ, ಮಹಾರಾಷ್ಟ್ರಿಗನೆಂದೇ ಹೇಳಿಕೊಂಡಿದ್ದ. ಕೊನೆಯ ದಿನ ಇನ್ನೇನು ನಾನು ಮಹಾರಾಷ್ಟ್ರ ಗಡಿಯನ್ನು ದಾಟಿ ಕರ್ನಾಟಕವನ್ನು ಪ್ರವೇಶಿಸುತ್ತಿದ್ದಾಗ ತಾನು ಬಂಜಾರ ಎಂದು ಹೇಳಿಕೊಂಡಿದ್ದು ನನಗೆ ಆಘಾತವುಂಟು ಮಾಡಿತು. ಇನ್ನೊಂದು ಸಲ ಹುಬ್ಬಳ್ಳಿ ಧಾರವಾಡದ ಪೊಲೀಸ್‌ಕಮಿಷನರ್ ಆಗಿದ್ದ ದೊರೆಸ್ವಾಮಿನಾಯ್ಕ ಅವರು, ನಾನು ಎಂ.ಎ.ಅಂತಿಮ ವರ್ಷದ ವಿದ್ಯಾರ್ಥಿ, ಶಾಲ್ಮಲಾ ಹಾಸ್ಟೆಲಿನ ಸಾಂಸ್ಕೃತಿಕ ಕಾರ್ಯದರ್ಶಿಯಾಗಿದ್ದೆ. ಅತಿಥಿಗಳನ್ನಾಗಿ ಹಾಸ್ಟೆಲ್‌ದಿನಾಚರಣೆಗೆ ಕರೆಯಲು ಹೋದಾಗ ಪ್ರೊ.ಪಾಟೀಲ್‌ಸರ್‌ಗೆ ನಾನು ನಮ್ಮ ಭಾಷೆಯಲ್ಲಿ ಮಾತಾಡಬಹುದೆ? ಅಂತ ಹೇಳಿದ್ದು ನನಗೆ ಅಚ್ಚರಿ ಉಂಟುಮಾಡಿತ್ತು. ನಾನು ಹೈಸ್ಕೂಲಿನಲ್ಲಿದ್ದಾಗ ನಮ್ಮ ತಾಯಿ ನಮ್ಮ ಉಡುಗೆ ತೋಟ್ಟು ಭೆಟ್ಟಿಯಾಗಲು ಬಂದಾಗ ಹುಡುಗರು 'ಲಮಾಣಿ' ಎಂದು ಹೀಯಾಳಿಸುವ ಸನ್ನಿವೇಶ ಇರಿಸುಮುರಿಸು ತಂದಿತ್ತು. ಅವೆಲ್ಲವನ್ನು ಮೀರಿ ಇವತ್ತು ಭಾಷೆ, ಸಂಸ್ಕೃತಿಯ ಉಳುವಿನ ಪ್ರಶ್ನೆ ಬಂದೊದಗಿದೆ, ಜನಾಂಗದ ಸವಾಲು ಎದುರಾಗಿದೆ ಈ ಸನ್ನಿವೇಶದಲ್ಲಿ ಅಧಿಕಾರದ ಆಶೆ ಮತ್ತು ಅಮಲಿನಲ್ಲಿ ಸಂಪೂರ್ಣವಾಗಿ ಜನಾಂಗವನ್ನೆ ನಿರ್ಲಕ್ಷಿಸಿರುವ ಬಂಜಾರ ಜನಾಂಗದ ನಾಯಕರು ಮುಂದಿನ ಪೀಳಿಗೆಯ ಬಗ್ಗೆ ಚಿಂತನೆ ಮಾಡಬೇಕಿದೆ. ಹಾಗೆಯೇ ಇವತ್ತಿನ ಯುವಕರು, ಪ್ರಜ್ಞಾವಂತರು ಜಾಗೃತಗೊಂಡು ಮುಂದಿನ ಪೀಳಿಗೆಗೆ ಸಂಸ್ಕೃತಿಯನ್ನು ತಲುಪಿಸುವ ಜವಾಬ್ಧಾರಿಯನ್ನು ತಮ್ಮ ಹೆಗಲ ಮೇಲೆ ಹೊರಬೇಕಾಗಿದೆ.

ಪ್ರೊ.ಶಿರಗಾನಹಳ್ಳಿ ಶಾಂತನಾಯ್ಕ

ಬಂಜಾರ–ಕನ್ನಡ

ಅ

ಅಂಗ್ (ನಾ)–ಜನಮೇರ್ ಏಕ್ ಭಾಗ್. ಮಾರ ಅಂಗ್ ಛೀಪ್ ಮತ್ – **ದೇಹದ ಒಂದು ಅಂಗ.**

ಅಂಗಳಾ (ನಾ) (ಕನ್ನಡ ಶಬ್ದ) –ಆಂಗಣೊ, ಘರೇರ ಆಂಗಣೊ, ಘರೇರ ಅಂಗಳಾ – **ಮನೆಯ ಅಂಗಳ.**

ಅಂಗಾರ್ (ನಾ) – ಬಳೇರೋ, ಲಾಗೇರೋ, ಅಂಗಾರ್ ತಾಪಕೊ – **ಬೆಂಕಿ**

ಅಂಗಾರ್ – **ಅಂಗಾರ್‌ವೇರೋ (ದ್ವಿರುಕ್ತಿ),** ರೀಸಾರೋ, ಊಅಂಗಾರ್ ಅಂಗಾರ್ ವೆರೋಚ – **ಸಿಟ್ಟಾಗು.**

ಅಂಗುಟಾ (ನಾ) – ನಾನ್ಕಿಲಪಣ್ ಮುಖ್ಯ ಆಂಗ್ಳಿ, ಹಾತೇರ್ ಅಂಗುಟಾ, ಟಾಂಗೇರ್ ಅಂಗುಟಾ – **ಹೆಬ್ಬೆರಳು**

ಅಂಗೋಳಿ (ಕ್ರಿ)–ಜಿವೇಪರ್ ಪಾಣಿರೇಡೆರೊ, ತಳಾಯೇಮಾ ಡುಂಮ್ಕಿ ಮಾರೇರೊ, ಅಂಗೋಳಿಕರ್ – **ಸ್ನಾನ.**

ಅಂಗೋಳೊ (ಕ್ರಿ) – ವಾಳ್ ಊಟೇರೊ ಅಂಗೋಳೊಉಟ್‌ರೋಚ್ – **ಬಿರುಗಾಳಿ ಚಂಡಮಾರುತ**

ಅಂಗೋಡಿ (ಕ್ರಿ)– ಜನಮ್ ತೋಡೆರೊ. ಅಂಗೋಡಿಬಾಂಜರೋ – **ಆಕಳಿಸಿ ಮೈಮುರಿಯುವಿಕೆ**

ಅಂಚಾರ್ (ನಾ)– ಅಂಬಾ, ಅಂಬ್ಲಿ ಕಾಟನ್ ನೂಣ್, ಹಳದ್, ಘಾಲನ್ ಘಣ್‌ದಾಡ್ ಮೇಲೆರೊ, ಅಂಬಾರ ಅಂಚಾರ್ – **ಉಪ್ಪಿನಕಾಯಿ**

ಅಂಟಾ (ನಾ) – ಘರೇಮಾ ಸೆಮಾನ್ ಮೆಲೆನ್ ರಜಕೋಗ್. ಅಂಟಾಪರಬೆಟೊ – **ಅಟ್ಟ**

ಅಂತರ್(ನಾ) – (ಕನ್ನಡ ಶಬ್ದ) ಫರಕ್, ದೂರಿ, ತೋಮನ ಓಮಕಾಂಯಿ ಅಂತರ್‌ಛ – **ಅಂತರ**

ಅಂತ್ರಾ (ನಾ) – ಭೂತ್‌ಪ್ರೇತ್ ಲಾಗಜೇನ್ ಭಂದಾಯೇರ್. ಜಾನ್‌ಅಂತ್ರಾ ಭಂದಲಾ – **ತಾಯಿತ**

ಅಂದಾರೋ (ಕ್ರಿ)– ದಕಾಂಯೇನಿಜಕೊ, ಕಾಳೊ. ಅಂದಾರೊ ವೆರೋಚ – **ಕತ್ತಲು**

ಅಂದಾಳಿ (ಕ್ರಿ)– ಆಂಕಿಮುಂಡಾಗ್ ಅಂದಾರೊ ವೇರೊ. ಕಸೇನಿಕ್ ಅಂದಾಳಿ ಅರೀಚ್ – **ತಲೆಸುತ್ತು.**

ಅಂದಾರೋಕೂಂವಾ (ನಾ) – ಕಾಂಯೀಜ್ ದಕಾಂಯೇನಿಜಕೊ.ಅಂದಾರೋ ಕೂಂವಾ ಮ ಪಡಮತ್ – **ಮಬ್ಬುಗತ್ತಲು, ಕತ್ತಲೆಬಾವಿ.**

ಅಂದಾಜ್ (ಕ್ರಿ)– ಸೋಚ್, ಅಂದಾಜ್ ಲಗಾ. ಅಂದಾಜ ಕರೇನ್ ವೇನಿ – **ಅಂದಾಜು**

ಅಂಬಾ (ನಾ) – ಖಾಟೋಫಳ್, ಮೀಟೋಫಳ್, ಅಸಾವಳ್ ಮಾಂಗಜಕೊ. ಅಂಬಾ ಖಾರೋಚ್ – **ಮಾವು.**

ಅಂಬರಾಯಿ (ನಾ) – ಅಂಬಾರ್‌ಬಾಗ್, ಅಂಬಾರ್ ರುಖಾಡೇರೊ ತೋಪ್ ಮುಂಡಾಗ ಅಂಬರಾಯಿ ವೆತ್ತಿ – **ಮಾವಿನ ತೋಪು.**

ಅಂಬಾಡಿರ ಭಾಜಿ (ನಾ) – ಲಾಂಬೊ ರುಖಾಡೇಪರ್ ಲಾಗಜಕೊ ಖಾಟ್ ಭಾಜಿ.ಅಂಬಾಡಿರ ಭಾಜಿರ ಖೋಡಿ, – **ಪುಂಡಿಪಲ್ಲೆ**

ಅಕ್‌ಬಕ್(ಕ್ರಿ)– ಚಕ್‌ಚೂಂದ್ ವೇರೊ ಮಾತೊ ದಾಂಸೆನಿಜಿಂವ್ ವೆರೊ. ಅಕಬಕ ವೇಗೊ – **ಗಲಿಬಿಲಿ**

ಅಕಲ್(ನಾ), ಅಕ್ಲ್, ಭೇಜೊ, ಮಾತೋ ದಾಂಸೆರೊ, ತೋನ್ ಅಕಲ್ ಛೇನಿ – **ಬುದ್ಧಿ**

ಅಕಾಸ್ ಮಾತ್(ಕ್ರಿ), ಏಕಾದ್‌ಮಣಾ, ಏಕ್‌ದಂ, ಅಕಾಸ್ಮಾತ್ ಅವತೊ– **ಇದ್ದಕ್ಕಿಂದ್ದಂತೆ**

ಅಕಾಲ್ (ನಾ) – ಕಾಳ್, ಪಾಣಿ ನಪಡಜಿಂವ್ ಸುಕಾಯೇರೊ, ಅಕಾಲ್ ಪಡೋ ತೊ – **ಬರಗಾಲ**

ಅಕೋಲ್ಡಿ (ನಾ) – ಢೋರೂರ್ ಗೋಬರ್, ಘಾಲಜಕೊ ಜಾಗ್, ಅಕೋಲ್ಡಿಮ ಗೋಬರ್‌ಛ – **ತಿಪ್ಪೆ**

ಅಗರ್ (ಸಂಭವನೀಯು), ಏಕ್‌ವಳಾ, ಅನುಮಾನ್, ಅಗರ ತು ಆಯಿತೊ, – **ಒಂದು ವೇಳೆ**

ಅಗರ್‌ಬತ್ತಿ (ನಾ) (ಕನ್ನಡ ಶಬ್ದ), ದೇವೆರ್ ಮುಂಡಾಗ್ ಲಗಾಡಜಕೊ ವಾಸ್ನಿವಾಳ್ ಕಡ್ಡಿ. ದೇವರ ಮುಂಡಾಗ ಅಗರಬತ್ತಿ ಲಣಾಡ – **ಊದಿನಕಡ್ಡಿ.**

ಅಗಲ್-ಬಗಲ್ (ದ್ವಿರುಕ್ತಿ),– ಏವ್ಡಿ-ಓವ್ಡಿ, ಅಕ್ತಿ-ಪಕ್ತಿ. ಅಗಲ್ ಬಗಲ್ ಆದ್ಮಿ ಸಾಂಬಳ ಚ, – **ಅಕ್ಕ ಪಕ್ಕ ನೆರೆಹೊರೆಯಲಿ**

ಅಗನಗಾಡಿ (ನಾ) – ಕೊಲ್ಯಾನ ಅಂಗಾರೇತಿ ಚಾಲೆರ್, ಲೋಂಯರ್ ಹಳಿಪ್, ಚಾಲೇರ್, ಧೂಂಭೋಡೆವಾಳ್. ಅಗನಗಾಡಿ ವಂ ಬೆಂಗಳೂರ ಜಾರೋಚು – **ಉಗಿಬಂಡಿ**

ಅಗ್ನಿ ಪರೀಕ್ಷ್(ಕ್ರಿ) – ಅಂಗಾರೇಪರ್ ಹೂಬ್ರಕಾಡೇರ್, ಕಠಿಣ್ ಪರೀಕ್ಷೆ ಕರೇರೊ. ಅಗ್ನಿ ಪರೀಕ್ಷೆ ಕರಮತ್ – **ಅಗ್ನಿ ಪರೀಕ್ಷೆ**

ಅಚಾನಕ್ (ಕ್ರಿ) – ಮಾಲಮ್‌ಭೇನಿಜಿಂವ್, ಏಕಾಏಕಿ ಅಚಾನಕ್ ಚಾಂದ ದಿಸೋ – **ಇದ್ದಕ್ಕಿದ್ದಂತೆ.**

ಅಮಾತ್ (ನಾ.ವಿ.) – ಅದ್ಮಿನ ಅದ್ಮಿ ಛೀಪೆನಿಜಕೊ, ಡಾಲ್ಯ, ಕಂಮ್‌ಜಾತೇರ್ ಕರನ್ ಕಳಜಕೊ. ಊ ಅಮಾತ್ ಹಾವ – **ಅಸ್ಪಶ್ಯ**

ಅಜಗರ್ (ನಾ) – ಪಲ್ಡ್, ಆದ್ಮಿನ್ ಗಲೇವಾಳೊ ಸಾಪ್. ಖೇತೆವಮಾ ಅಜಗರ್ ವೆತ್ತೊ – **ಹೆಬ್ಬಾವು**

ಅಜಗರಿ(ನಾ.ವಿ.) – ಅಸಾವಾಳೊ, ಅಸಾಖೋರಿ, ಕಾಂಯಿ ಅಜಗರಿ ಛೀ – **ಆಶೆ ಬುರುಕ.**

ಅಜಮೋ(ನಾ)– ನಾನೊದಾಣ, ಮಾಚಳೀರ್ ಲಗಾವಣೆಮಾ ಘಾಲಜಕೊ. ಅಜಮೊ ಖೋ – ಅಜವಾನ ಬೀಜ

ಅಜೀಬ್ (ಕ್ರಿ) – ಏಕ್ ನಮೂನಿ, ಕಸೊವೇರೊ. ಅಜಿಬ್ ಸಪ್ನೋ ಆಯೊ ಒಂದು ನಮೂನಿ. – **ವಿಚಿತ್ರ, ಆಶ್ಚರ್ಯ**

ಅಜಿ? (ಪ್ರಶ್ನಾರ್ಥಕ), ಪಚ್ಚ ಅಜಿ ಕಾಂಯಿಕ – ಇನ್ನೇನು ?

ಅಜ್ಞಾನಿ(ಗು.ವಿ) – ಅಡ್ನಾಡಿ, ಭೇಜೊ ಛೇಯಿಜಕೊ. ಊ ಮೋಟೊ ಅಡ್ನಾಡಿ ಹಾವ – **ಮೂರ್ಖ ಅಜ್ಞಾನಿ ಬುದ್ದಿ ಇಲ್ಲದ ಕಪಿ**

ಅಗ್ಗಿ ಪೆಟಗಿ (ನಾ) – ಅಂಗಾರ್ ಡಬ್ಬ, ಅಂಗಾರೇರ್ ಕಡ್ಡಿ ಘಾಲಜಕೊ. ಅಂಗಾರ್ ಡಬ್ಬಾ ಲಾತೋ – **ಬೆಂಕಿ ಪೆಟ್ಟಿಗೆ**

ಅಡಚಣ್ (ಕ್ರಿ) – ಸಮಸ್ಯಾ, ತೊಂದ್ರಿ, ಅನಾನ್‌ಕೂಲ್. ಕಾ ಕೊ ಅಡಚಣ್ ವೇಗಿಚ ಅಡಚಣೆ, ತೊಡಕು – **ತೊಂದರೆ**

ಅಡೊಸ – ಪಡೊಸ್ (ದ್ವಿರುಕ್ತಿ) – ಆಕ್ತಿ-ಪಾಕ್ತಿ. ಅಡೊಸ್ -ಪಡೊಸ್ ಮಾ ಆದ್ಮಿ ಆಚ್ ರೇಣು – **ಅಕ್ಕ-ಪಕ್ಕ ನೆರೆ ಹೊರೆ**

ಅಡಾಯಿ–(ಸಂಖ್ಯಾ ವಾಚಕ), ದಿನ್ ಆದೊ. ಅಡಾಯಿ ರಪ್ಯಾ – **ಎರಡೂವರೆ**

ಅತ್ತ (**ಸ್ಥಳ ಸೂಚಕ**), – ಅತ್ತಜ್. ಊಂದರ್ ಅತ್ತಜ್ ವೆತ್ತೊ – **ಇಲ್ಲಿ.**

ಅತೇತಿ (**ಸ್ಥಳ ಸೂಚಕ**), ಶುರು, ಚಾಲು, ಆರಂಭ್.ಅತೇತಿ ಜಾಣೂ – **ಇಲ್ಲಿಂದ**

ಅತ್ರಾ (**ಪ್ರಮಾಣವಾಚಕ**), ಪ್ರಮಾಣ ದಕಾಳೇರೊ. ಮನ್ನ ಅತ್ರಾಜ್ ಪಿಸಾಕ – **ಇಷ್ಟೆ**

ಅತ್ರಾಜ್ (**ಪ್ರಮಾಣವಾಚಕ**) – ಏಕ್ ಪ್ರಮಾಣ ಕೇರೊ. ಅತ್ರಾಜ್ ಧೇರ್ ಕ – **ಇಷ್ಟೆ ಸಾಕ**

ಅತ್ರಿ (**ಸಂಖ್ಯಾ ವಾಚಕ**), ಗಣೇರೊ, ಪ್ರಮಾಣ್‌ಕೆರೊ, ಅತ್ರಿ ಗೋರ್ಲಿ ವೆತ್ತಿ ಬಹಳ – **ಅತಿಶಯ, ಹೆಚ್ಚಿನ**

ಅತ್ಯಾಚಾರ (ಕ್ರಿ)– ಬೀರೆವೂನ ಛೇಡೆವಾಳೊ, ಊ ಅತ್ಯಾಚಾರಿ ಹಾವ – **ಅತ್ಯಾಚಾರ, ಬಲಾತ್ಕಾರ**

ಆತ್ ಆನಿ (ಕಿ) – ಬಲಾಂಯೇರೊ, ಹಕಾರೆರೊ. ಅತ್ ಆನಿ ಜಲ್ದಿ – **ಇಲ್ಲಿ ಬಾ**

ಅತ್ ಆನಿ ಏ (ಸ್ತ್ರೀವಾಚಕ) – ಚೋರಿನ್, ತಾಂಡ್ರೀನ್ ಬಲಾಯೆರೊ. ಅತ್ ಆನಿಯೇತು, – **ಸ್ತ್ರೀಯನ್ನು ಕರೆಯುವುದು.**

ಅತ್ ಆನಿರ (ಪುರುಷ ವಾಚಕ)– ಮರ್ದೆನಾ, ಛೋರಾನ ಬಲಯೆರ. ಅತ್ ಆನಿರ ಜಲ್ದಿ – **ಪುರುಷರನ್ನು ಕರೆಯುವುದು.**

ಅತ್‌ಅವೊನಿ (ಬಹುವಚನ)– ಗುಂಪೇನ ಬಲಂಯೆರೊ, ವೋಟ್ ಅದ್ಮಿನ್ ಬಲಾಯೆರೊ. ಅತ್‌ಆವೊನಿ ಬಾಪು, – **ಇಲ್ಲಿ ಬನ್ನಿ**

ಅದ್ಲಿ–ಬದ್ಲಿ (ದ್ವಿರುಕ್ತಿ) – ಏನ್–ಓನ್ ಕರೆರೊ. ಅತ್ತ ಅದ್ಲಿ–ಬದ್ಲಿ ವೇಗೆ – **ಅದಲು–ಬದಲು, ಬದಲಾವಣೆ**

ಅದ್ರಕ್ (ನಾ) – ಸೂಂಠ್, ಅದ್ರಕ್ ಘಾಲನ್ ಚಾ ಕರ್ – **ಶುಂಠಿ**

ಅಧಿಕಾರ್ (ಕನ್ನಡ ಶಬ್ದ) – ಮೋಟೊ ಅದ್ಮಿ ತೋನ್ ಅಧಿಕಾರ್ ಛೇನಿ, – **ಅಧಿಕಾರ**

ಅಧೂರೊ (ಗುಣ ವಿಶೇಷಣ) – ಲೂಳೊ, ಶಕ್ತಿ ಛೆನಿಜಕೊ ಆಧೂರೋ ವೇಗೂಚು **ಅರೆ ಬರೆ, – ಅಪೂರ್ಣ**

ಅನಗಢ್ (ಗುಣ ವಿಶೇಷ) – ರೂಪ್ ಛೇನಿಜಕೊ, ಆಕಾರ ಛೇನಿಜ ಕೊ. ಕಾಂಯಿ ಅನಗಢ್ ಛವೊ – **ರೂಪವಿಲ್ಲದ, ಆಕಾರವಿಲ್ಲ.**

ಅನಪಡ್ (ಗು.ವಿ.) – ಲಕ್ಕೇನ್, ಓದೇನ್ ಆಯೇನಿಜಕೊ, ಜ್ಞಾನ್ ಛೇನಿಜಕೊ. ಊಕಾಂಯಿ ಅನಪಡ್ ಛ – **ತಿಳಿಗೇಡಿ**

ಅನಕೂಲ್ (ಕಿ) – ಸಂಮೋರ್, ಸೆಜ್‌ರೆರೊ. ಫಣೊ ಅನಕೂಲ್ ವೆತ್ರೊ, – **ಅನುಕೂಲ, ಹಿತ.**

ಅನಾಡಿ (ಗು.ವಿ.), ಅಡ್ನಾಡಿ, ಬಿಡಾಡಿ. ಅನಾಡಿ ವೇನ ಫರ್ರೋಚ್ – **ಪುಡಾರಿ, ಅಜ್ಞಾನಿ.**

ಅನಾಥ್ (ಕನ್ನಡ ಶಬ್ದ) (ಕ್ರಿಯಾವಿಶೇಷ), ವಗರ್ ದಿಕ್ಕುರೊ, ವಾ–ಬಾಪ್ ಛೇನಿಜಕೊ. ಮ ಅನಾಥ್ ವೇಗೊ – **ಅನಾಥ, ತಬ್ಬಲಿ**

ಅನಾಥಾಶ್ರಮ (ಕ.ಶ), ದಿಕ್ಕು ಛೆನಿಜಕೊ ರೇರ್ ಜಾಗ್ ಮ ಅನಾಥಾಶ್ರಮಮ್ ರೂಂಚು – **ಅನಾಥಾಲಯ, ಅನಾಥ ಆಶ್ರಮ**

ಅನ್ನ್ (ನಾ), ಖಾಣೊ, ಅನಾಜ್, ದಾಣಾದಪಾಣ. ಊ ಅನ್ನ್‌ಛೇನಿ ಜಿಂವ ವೇಗೊ, **–ಆಹಾರ, ಧಾನ್ಯ**

ಆನ್ ಅಜಿಕಾಂಯಿರ ? (ಪ್ರಶ್ನಾರ್ಥಕ), ಪ್ರಶ್ನಿ ಕರೇರೊ, ಅನುಮಾನ್ ವೆರೊ. ಅನ್ ಅಜಿ ಕಾಂಯಿ – **ಆಮೇಲೆ**

ಅನ್ಯಾಯ (ಕನ್ನಡ ಶಬ್ದ), ಏಕಾದೀನ್ – ಮೊಸ ಕರೇರೊ. ಅನ್ಯಾಯ ಕರ್ ಮತ್– – **ಅನ್ಯಾಯ**

ಅನುಭವ್ (ಗು.ವಿ.) – ಕರನ್‌ರೂಢಿ ರಜಕೊ. ಮುನ್ನ ಅತ್ರಾ ಅನುಭವ್ ಛೇನಿ– **ಅನುಭವ**

ಅನುರೋಧ್(ಕಿ) – ವಿಂತಿ, ಪುಚೇರೊ, ಅನುರೋಧ್ ಕರ್, ವಿನಂತಿ – **ಒತ್ತಾಯ**

ಅನುಕಂಪ್(ಕನ್ನಡ ಶಬ್ದ) – ಕಷ್ಟಾ ಮರಜೇನ್ ದೇಕನ್ ಹಾಯ್ ಕರೇರೊ. ಅನುಕಂಪ್ ದಕಾಳ ಮತ್– **ದಯೆ, ಅನುಕಂಪ**

ಅನುಪಮ್ (ಗು.ವಿ), ನವೊ, ಅಪರೂಪೇರೊ. ಒರ್ ವಿಚಾರ್ ಅನುಪಮ್ ಛ ಹೋಲಿಕೆಯಿಲ್ಲದ. – **ಅನುಪಮ. ಶ್ರೇಷ್ಠ**

ಅನೇಕ್ (ಸಂಖ್ಯವಾಚಕ) – ಘಣ್, ವಣಾನ್. ಅನೇಕ್ ಆದ್ಮಿವೆತ್ತೆ – **ಅನೇಕ, ನಾನಾ ತರಹದ**

ಅನಾನಸ್ (ಕನ್ನಡ ಶಬ್ದ) – ಏಕ್ ಜಾತೇರ್ ಫಳ್. ಅನಾನಸ್ ಖಾವೊ – **ಅನನಾಸು.**

ಅಪಶಕುನ್(ಕ್ರಿ)– ಸಮುಣ್, ತೊಡಕ್ ವೆರೊ. ಕಾಮೇಮು ಅಪಶಕುನ್ ವೇಗೊ **ಅಪಶಕುನ**

ಅಪಂಗ್ (ನಾ.ವಿ) – ಜನ್ಮೇಮ್ ಏಕ್ ಭಾಗ್ ಚೇಯಿಜಕೊ, ಅಧೂರೊ. ವೂ ಜನ್ಮೇತೀಜ್ ಅಪಂಗ್ ಛ – **ಅಂಗವಿಕಲ ವಿಕಲಚೇತನ**

ಅಪಕಾರ್ (ಕ್ರಿ.ವಿ.) – ದಕ್ ದೇವಾಳೊ, ಉಪ್ಕಾರ್ ಕಿದೇಜೆನೆ ಭೂಲೇವಾಳೊ. ಕೇನೀಜ್ ಅಪ್ಕಾರ್ ಕರ್‌ಮತ್ – **ಹಾನಿ**

ಅಪಚಾರ್ (ಕ್ರಿ.ವಿ.) – ಭೂಲ್‌ಕರೇರ್ ಅಪಚಾರ್ ಕರ್ ಮತ್, **ದುರ್ವರ್ತನೆ**

ಅಪಣ್ (ನಾ.ವಿ) – ಸೆಜ್ಜಿ, ಮಳಾವೊ, ಫಣ್. ಅಪಣ್ ಗೊರ್ ಹಾವ್ – **ನಾವೆಲ್ಲಾ**

ಅಪಣೂರ್ (ಬಹುವಚನ)–ಸೇರೀಜ್, ಮಳಾವೇರ್, ತಾಂಡೇರ್. ಅಪಣೂರ್ ಮಲ್ಕ್ ಹಾವ – **ನಮ್ಮೆಲ್ಲರ**

ಅಪಮಾನ್ (ಕನ್ನಡ ಶಬ್ದ) – ಏಕಾದೀರ್ ಮುಂಡಾಗ ಹೀನಾಯತಿ ವಾತೆ ಕರೇರೊ. ಮನ್ನ ಅಪಮಾನ ವೇಗೋ.– **ಅವಮಾನ**

ಅಪರಾಧ್ (ಕ್ರಿ.ವಿ.) – ತಪ್ ಕರೇರೊ, ಮಾರೇರೊ, ಚೋರಿಕರೇರೊ. ಅಪರಾಧ್ ಮತ್ತ್ ಕರೊ – **ಅಪರಾಧ, ತಪ್ಪು**

ಅಪರಾಧಿ (ಕ.ಶ) – ತಪ್‌ಕರಮೇಲೊ ಜಕೊ, ಚೋರಿಕರ್‌ಮೆಲೊಜಕೊ.ಅಪರಾಧಿ ಮತ್ತ್ ವ, – **ಅಪರಾಧಿ.**

ಅಪರಚಿತ್ (ಕ.ಶ) – ಮಾಲಂ ಚೇನಿಜಕೊ, ಖೂನ್ ಛೇನಿಜಕೊ, ಕೂಣ್ ಕರನ ಮಾಲಮ ಛೇನಿ ಜಕೊ. ಊ ಅಪರಿಚಿತ್ ಮಾಣಸ್ಸ ಛ – **ಅಪರಿಚಿತ, ಪರಿಚಯ ತಿಳಿಯದ**

ಅಪರೂಪ್ (ಗು.ವಿ) – ಫಣೊ ಮೊಲೆರೊ, ಕತ್ತಿ ಮಳೆನಿಜಕೊ, ಫಣ್ ದಾಡೆಂ ದಕಾಯೆರೊ.ಕಾಂಯಿ, ಭಾ ಫಣೋ ಅಪರೂಪ್ ವೇಗೋಚಿ – **ಅಪರೂಪ**

ಅಪವಾದ್(ಕ್ರಿ) – ಗಲ್ತಿ ನಕರತೋಯಿ ಗಪ್ ಕಿದೊ ಕೆರೊ. ಹೈಂಜ್ ಗಪ್ ಗಪ್ ಅಪ್‌ವಾದ್ ಲಗಾವೊವತ್ – **ಅಪವಾದ ಹೊರಿಸುವುದು, ನಿಂದೆ, ಆರೋಪ**

ಅಪಹರಣ್ (ಕ್ರಿ) – ಕಾಲ್ಡೇನ್ ಧಾಂಸ್, ಭೋರಿನ್ ಲೆಲೆನ್ ಜಾಂಯೆರೊ, ದಸಾಲ್ಡೆಗೊ, ಕಾಲ್ಡೇಗೊ. ಓರ್‌ಉಪರ್ ಅಪಹರಣ್ ಕಿದೊಜಕೊ ಕೇಸ್ ಛ – **ಅಪಹರಣ**

ಅಪಹಾಸ್ಯ (ಕ್ರಿ) – ನಕಲಿ, ನರವೊ ಮಾಣಸನ್ ದೇಖನ್ ಹಾಂಸೇರೊ, ನಕಲಿಕರ್. ಅದೂರೇನ್ ದೇಖನ್ ಅಪಹಾಸ್ ಮತ್ತ್ ಕರ್ ಗೇಲಿ– **ಅಪಹಾಸ್ಯ**

ಅಪವಿತ್ರ (ಗು.ವಿ.) – ಛೀಪನ್‌ಅಮಂಗಲ್ ಕರ್. ಚಿಂಪ್ಯಾಕನ್ ಅಪವಿತ್ರ ಕರ್ನಾಕೊ – **ಅಪವಿತ್ರ**

ಅಪೇಕ್ಷಾ (ಕ್ರಿ) – ಮನೇರ್ ಮಾಯಿರ್ ಆಸಾ, ಕರುಣೂಜ್ ಕೇರೊ. ಫಣೋ ಅಪೇಕ್ಷಾವೆತ್ತಿ – **ಅಪೇಕ್ಷೆ**

ಅಪ್ಸರಾ (ಗು.ವಿ.) – ಖಲಾವಣಿ, ಜಗತ್ತೇಜ್‌ಮಾ ಸುಂದರಿ. ಊ ಅಪ್ಸರಾ ಛ ಜೆಂವ್ ಛ – **ಅಪ್ಸರೆ**

ಅಬ್ (ಕ್ರಿ) – ಈ ವೇಳೇಮ್, ಈ ಕ್ಷಣೇಮ್. ಅಬ್ ಸದ್ಯ – **ಈಗ**

ಅಬ್ಬೇರ್ ಹಾಲ್ (ಕಾಲವಾಚಕ) – ದಸ್ಸೆಕ್ ವಳಾರ್ ಆಂಗ, ಅಬ್ಬ್‌ಜ. ಅಬ್ಬೇರ್ ಹಾಲ್ ಖಾದೊ ಈಗಿಂದೀಗ್ಗೆ, – **ಈ ಕ್ಷಣದಲ್ಲಿ.**

ಅಬ್ಬೇತೀಜ್ (ಕಾಲವಾಚಕ) – ಏ ಕ್ಷಣಾತಿ, ಏ ವಳಾತಿ. ಅಬ್ಬೇತೀಜ್ ಪರೀಕ್ಷಾನ ತಯಾರಿಕರ್ – **ಈಗಿನಿಂದಲೆ**

ಅಬರೂ, (ಗು.ವಿ.) – ಸರವನ್, ಏಕೆ ಮುಂಡಾಗ ನಾನ್ಯಾಕರೇರೊ.ಅಬರೂ ಕಾಡಮತ್ತ್ – **ಮಾನ ಮರ್ಯಾದೆ**

ಅಬ್ಬಜ್ (ಕ್ರಿ) – ಅಬ್ಬೇಹಾಲ್, ಅಬ್‌ಸದ್ಧೆ. ಅಬ್ಬ್‌ಜ್ ಜಾಂವಚು – **ಈಗಲೇ**

ಅಭಾವ್ (ಕ್ರಿ) – ಕಂ, ಕಮ್‌ವೇರೊ. ಖಾಣೇರ ಅಭಾವ್ ಛ ಅಭಾವ, **ಕೊರತೆ**

ಅಭಾಗ್ಯ (ಗು.ವಿ.) – ಕಾಂಯಿತೊಯಿ ಘಟನೆ ಘಟೇರೊ. ನಸಿಬ ಅಭಾಗ್ಯ ಲಕಮೆಲೊಚ್ – **ದುರಾದೃಷ್ಟ.**

ಅಭಿನಂದನ್(ಕ್ರಿ) – ವೊಟೊಕಾವನ್ ಕರಜೇನ್ ಶಭ್ಬಾಷ್ ಕೇರೊ, ಗುಣಗಾನ ಕರೇರೊ. ತೋನ ಅಭಿನಂಧನ್, – **ಅಭಿನಂದನೆ, ಪ್ರಶಂಸೆ**

ಅಭಿಮಾನ್ (ಗು.ವಿ) – ಆಚೋಆದ್ಮಿಪರ್ ರಜಕೊ ಮರ್ಯಾದಿ. ತೊಪರ್ ಓರೋ ಮಹಾಭಿಮಾನ್ ಅಭಿಮಾನ – **ಹೆಮ್ಮೆ, ಗರ್ವ**

ಅಭಿಪ್ರಾಯ್ (ಕ್ರಿ)– ಏಕ್ ಆದ್ಮಿ ಕರ್ ಮಲಜಕೊ ಕಾಮೇನ ದುಸರೇದಾಂಯಿ ಪುಚೇರೊ. ತಾರ್ ಅಭಿಪ್ರಾಯ್ ಕ

ಮನ್ನ – **ಅಭಿಪ್ರಾಯ**

ಅಭಿಲಾಷಾ (ಕ್ರಿ)– ಮನ್ಸೆ ಮಾಯಿರ್ ಆಸಾ. ತೋನ್ ದೇಕೆರೊ ಮಾರ್ಅಭಿಲಾಷ ಛ ಆಸೆ – **ಅಭಿಲಾಷೆ.**

ಅಭಿವ್ಯಕ್ತಿ (ಕ್ರೀ)– ಏಕ್ ಅದ್ಮೀರ್ ಮನಸೆಮಾಯಿರೊ ಕೇಣೊ. ಕಾಂಯಿಕೆನ್ ಅಭಿವ್ಯಕ್ತಿ ಕರ್ – **ವ್ಯಕ್ತ ಪಡಿಸುವುದು**

ಅಭಿಶಾಪ್ (ಕ್ರಿ)– ಶ್ರಾಪ್. ಅಭಿಶಾಪದೀನೋ – **ಶಾಪ, ಅಭಿಶಾಪ.**

ಅಭಿಷೇಕ್ (ಕ್ರಿ)– ದೇವೆರ್ ಉಪರ್ ಪಾಣಿ ಅನ್‌ದೂದ್ ರೇಡೇರೊ. ದೇವೆನ ಅಭಿಷೇಕ್ ಕರ್ಣೂ – **ಅಭಿಷೇಕ**

ಅಬ್ಬೇತೂಣಿ (ಕ್ರಿ)– ಅತ್ರಿವಳಾ, ವಗತ್. ಅಬ್ಬೆತುಣಿ ಅಬ್ಬೆತುಣಿ ಆಯೋ ಕೋನಿ – **ಇಲ್ಲಿಯತನಕ, ಇದುವರೆಗೆ**

ಅಬ್ಬೆತೀಜ (ಕ್ರಿ)– ಏ ಕ್ಷಣೇತಿ. ಅಬ್ಬೆತೀಜ್ ಕರೋ – **ಈಗಿನಿಂದಲೇ.**

ಅಮರುತ್ (ನಾ) – ದೇವ್ ಪಿದೆಜೆತಿಮರಣ್ ಆಯೇನೀಜಿಂವ್ ಅಮರ್ ವೆರೊ. ಅಮರುತ್ ಪೀ – **ಅಮೃತ**

ಅಮವಾಸ್(ನಾ) – ಅಮಾಸ, ಚಾಂದ ದಿಕೇನಿಜಕೊ ರಾತ್. ಆಜ್ ಕಾಳಿಮಾಸ್ ಹಾವ್ – **ಅಮಾವಾಸ್ಯೆ**

ಅಮಾನತ್ ವತ್ತಿಮೇಲ್ (ನಾ.ವಿ) – ದಲೇನ್ ದಾಂಯಿಭಜಕೊ ಚೀಜ್ ಅಡಮೇಲ್. ಮಾರ್ ಸೂನೇರ ಅಮಾನತ್ ವತ್ತಿಮೇಲ್ – **ಠೇವು ಅಡವಿಟ್ಟ ವಸ್ತು**

ಅಸಾವಾಳ್ (ನಾ.ವಿ) – ತೀನ್‌ಮಿನಾಮ್ ಆಸಾತಿ ವಜಕೊ, ಧೂಡ್ ಕೊಲ್ಯಾ, ಭಾಟಾ, ಅಂಬಾ, ಆಂಬ್ಲಿ, ಖಾಣೂಕೇನ್ ವಜಕೊ. ಆಸಾವಾಳ್ ತಾಂಡ್ರಿ – **ಬಯಕೆ**

ಅಮೂಲ್ಯ (ಗು.ವಿ) ಮೋಲ್ ಭಾಂದೇರ್ ವೇನಿಜಕೊ, ಅಮೂಲ್ಯವೆತ್ತಿ – **ಬೆಲೆ ಕಟ್ಟಲಾಗದ ಅಮೂಲ್ಯ.**

ಅಮಲ್ (ಕ್ರಿ)– ಪೀನ್‌ಧುತ್ ವೆನ್ ಪಡೆರೊ. ಅಮಲ್ ವೆಗೋ – **ನಶೆ**

ಅಯೋಗ್ಯ (ಕ್ರಿ)– ಕಾಮೇನ್ ಆಯೇನಿಜಕೊ. ಕಾಂಯಿ ಅಯೋಗ್ಯ ಛ ರ ಊ – ನಿರುಪಯುಕ್ತ

ಅರಜಿ (ಕ್ರಿ.ಶ) – ಕಾಮ್‌ವೆಸಾರೊ ಲಕ್ಕಜಕೊ ಕಾಗದ್. ಕಾಮೇನ ಅರಜಿ ಘಾಲ್ – **ಅರ್ಜಿ, ವಿನಂತಿ ಪತ್ರ**

ಅರಮಾನ್ (ನಾ) – ಮನ್ಸೆ ಮಾಯಿರೊ. ಮಾರ ಅರಮಾನ್‌ವೆತ್ತೊ – **ಬಯಕೆ**

ಅರಿಷ್ಟ (ನಾ.ವಿ)– ಶನಿಲಾಗ್, ಕಾಯಿಂಜಕಾವ್ ಕರೆನಿಜಕೊ. ತೋನಕಾಂಯಿ ಅರಿಷ್ಟ ಲಾಗರೋ – **ಅನಿಷ್ಟ, ಕೆಡಕು, ಹಾನಿ**

ಅರೂ (ನಾ.ವಿ)– ಸಮಜ್, ಜೀವೆಪರ್ ಪ್ರಜ್ಞೆ, ಅರೂ ರಕಾಡ್ – **ಪ್ರಜ್ಞೆ**

ಅಲಗ್ (ನಾ.ವಿ) – ದೂಸರೊ, ನಾಳಿ. ದೂಸರೇರ್ ಘರ್ – **ಬೇರೆ.**

ಅಲಗ್–ಅಲಗ್ (ದ್ವಿರುಕ್ತಿ)– ದೂಸರ್– ದೂಸರ್, ನಾಳಿ–ನಾಳಿ. ಅಲಗ್–ಅಲಗ್ ಮೇಲ್ – **ಬೇರೆ ಬೇರೆ**

ಅಲ್ಪ (ನಾ.ವಿ) –ನಾನ್‌ಕ್ಯಾ, ಇಜ್ಜತ್‌ಛೆನಿಜಕೊ ಅಲಪ್ ಮಾನಸ್ ಛೀ – **ತುಚ್ಛ**

ಅಲಂಕಾರ್ (ನಾ.ವಿ)– ಸದಾರ್, ಸದಾರೇರೊ ಸದಾರೇರೋ – **ಅಲಂಕಾರ**

ಅಲ್ಲಾ (ನಾ) – ಮಸಾಲೆಮ್ ಗಾಲೇರ್. ಅಲ್ಲಾ ಘಾಲ್ – **ಶುಂಠಿ.**

ಅವಶ್ಯ (ಕ್ರಿ) – ಚಾಣೂಜ್, ನಾಕಾಮ್ ವೆನಿಜಕೊ ಅವಶ್ಯಚಾವ – **ಖಂಡಿತವಾಗಿ**

ಅವಸರ್ (ಕ್ರಿ) – ಗಡ್‌ಬಡ್. ಬಡಕೋ ಅವಸರ್ ಕರ್ – **ಬೇಗ**

ಅವಮಾನ್ (ಕ್ರಿ)– ಅಪಮಾನ್ ಕರ್‌ಜೇನ ಠೇಸ್ ಪುಂಚಾ, ಅವಮಾನ ವೇಗಿ ಅವಮಾನ – **ತಿರಸ್ಕಾರ**

ಅವತಾರ್ (ಕ್ರಿ) – ನವೇತಿ ಜನ್ಮ ಲ. ಅವತಾರ ಲ – **ಅವತಾರ**

ಅವಕಾಶ್ (ಕ್ರಿ) – ಕಾಮ್ ಕರೇನ್ ಮೊಕಾ. ಓನ ಅವಕಾಶ್ ದ ಮತ್ತ – **ಅವಕಾಶ**

ಅವಾಜ್(ಕ್ರಿ) – ದಲ್‌ಕಾರ್, ಹಂಕಾರ್, ಜೊರ್ತಿಕ. ಅವಾಜ್ ಕರ್ ಧ್ವನಿ – **ಶಬ್ದ**

ಅಶಕ್ತ್(ಕ್ರಿ) – ಕಾವ್‌ವೆನಿಜಕೊ, ಕಾಮೆರೊಚೆನಿಜಕೊ, ಅಶಕ್ತ್‌ವೇಗೋ. ಕಸನ್‌ಕೊ ಅಶಕ್ತ್ ವೆಗೊಚ – **ಶಕ್ತಿ**

ಇಲ್ಲದ ಅಶಕ್ತ

ಅಶಾಂತಿ (ಕ್ರಿ) – ಮಾತೆಮಾ ಅಂಗಾರ್ ವುಟೇರೊ, ಅಶಾಂತಿ, ಪೇಲಗೀಚ ಶಾಂತಿಯಿಲ್ಲದ, **ಅಶಾಂತಿ.**

ಅಶುದ್ಧ್(ಗು.ವಿ)– ಆಚ್ಯೊಚೆನಿಜಕೊ. ಅಶುದ್ಧ್ ಪಾಣಿ ಹಟಾವ್ರೊ– **ಅಶುದ್ಧ**

ಅಶುಭ್ (ಗು.ವಿ) – ಕೇಡ್‌ವೆರೊ. ಅಶುಭ್ ಮತ್ ಕರೋ ಅಶುಭ – **ಅಮಂಗಳ**

ಅಸಲ್ (ನಾ) – ಪಿಸಾದಿನಿಜಕೊ. ಅಸಲ್ ಮಾಂಗ್, – **ಮೂಲಧನ, ಅಸಲು**

ಅಸಲಿಯತ್ (ಗು.ವಿ) – ಕರೋವಾಜೇರೊ. ಅಸಲಿಂಯತ್ ವಾಲವಸ್‌ಕರ್ – **ನಿಜಾಂಶ, ತಾಜಾತನ**

ಅಸಲಿ (ಗು.ವಿ) – ಖರೊ. ಅಸಲೀ ಸೋನೋ – **ನಿಜವಾದ, ಶುದ್ಧವಾದ**

ಅಲ್ಡಾ (ಕ್ರಿ)– ಬರ್ಕಾ, ಹಂಕಾರ್, ಚೀಕ್‌ಮಾರ್, ಜೊರ್ತಿರೊ. ಅಲ್ಡಾಮತ್ – **ರೋಧಿಸು**

ಅಸಹಾಯ್ (ಕ್ರಿ)–ಕಾಂಯಿಜ್ ಕರೇನ್ ವೆನಿಜಕೊ, ಜಿಂವೆರೊ. ಅಸಹಾಯ ಮತ್ ವೋ – **ಅಸಹಾಯಕ, ನಿಸ್ಸಾಹಾಯ**

ಅಸಯ್ಯ್ (ಕ್ರಿ)– ಫ್ರೀಣ್, ಅಸಯ್ಯ್ ವೇಗೋ – **ಸಹಿಸಲಾಗದ**

ಅನಾಡಿ (ಗು.ವಿ) – ವೆಂಡೊ, ಪುಡಾರಿ. ಅನಾಡಿ ಥ – **ಮೂರ್ಖ**

ಅಸನಾನ್ (ಕ್ರಿ)– ಅಂಗೋಳಿ, ಪಾಣಿರೇಡ್ ಅಸನಾನ್‌ಕರ್, ಅಂಗೋಳಿ ಕರ್ – **ಸ್ನಾನ**

ಅಸ್ತರ್ (ಗಾ) – ಪೆಟಿಯಾಪರ್ ಸಿಡೇರೊ ಅಸ್ತರ ಝುಲ್ಲ್ ಮತ್ – **ಸೀರೆ ಮೇಲೆ ಹೊಲೆಯುವ ಬಟ್ಟೆ**

ಅಸ್ಸಿ (ಸಂ.ವಾ) – ಸಾಟೆಪರ್ ಸತ್ರ್, ಅಸ್ಸಿ ಆದ್ಮೀ – **ಎಂಬತ್ತು**

ಅಹಂ (ಗು.ವಿ) – ಗರಭ್. ಅಹಂ, ಭೊಡೊ – **ಅಹಂ**

ಅಹಂಕಾರ್ (ಗು.ವಿ.)–ಗರಬೇವಸ್ ಚೂರ್‌ಚೂರ್ ವೆರೊ, ಅಹಂಕಾರ ಭೋಡೋ, – **ಅಹಂಕಾರ**

ಅಹಂಕಾರಿ (ಗು.ವಿ.) – ಗರಬೇವಸ್ ಅರೋಜಕೊ ವಾಣಸ್. ಅಹಂಕಾರಿ ಮತ್ ಬನ್ – **ಗರ್ವಿಷ್ಠ**

ಆ

ಆ (ಕ್ರಿ)– ಬಲಾ, ಹಂಕಾರ್, ಆನಿಪಚ್ – **ಬಾ**

ಆಂಕಿ (ನಾ) – ದೇಕಜಕೊ. ಅಂಕಿತಿ ದೇಕ್ – **ಕಣ್ಣು**

ಆಂಕಿಮಿಚ್ಚೋ ರಮ್ಮೇರೋ (ಕ್ರಿ), ಕೇನಿದ ಕಾಯೇನಿಜಿಂವ್ ರಮ್ಮೇರೊ ಅಂಕಿ ಮಿಚ್ಚಿನ ರಮ್ಮೆರೊನ –**ಕಣ್ಣಾಮುಚ್ಚಾಲೆ ಆಟ**

ಆಂಕಿಮಾರ್ (ಕ್ರಿ)– ಆಂಕಿಟವ್ಕೊ ದಾ ಆಂಕಿಮಾರ್ ಮತ್ – **ಕಣ್ಣು ಹೊಡೆ**

ಆಂಕಿ ಮಾರೋ (ಕ್ರಿ)– ಆಂಕಿಟಮ್ಕೊದಿನೊ. ಊತಾಂಡ್ರೊ ಆಂಕಿಮಾರೊ, – **ಕಣ್ಣು ಹೊಡೆದ**

ಆಂಕೇರ ಝಾಡ್ (ನಾ) – ವಿಯಾಮಾ ಆಂಕ್ಡಾ ಬಾಂದಜಕೊ, ಆಂಕೇರ ಝಾಡ್ ಹುಗಾಡ್, – **ಯಕ್ಕೆಯಗಿಡ**

ಆಂಕೇರ ಪೂಲ್ (ನಾ), ಆಂಕೇರ್ ಝುಡೇಮ್ ಫೂಟಜಕೊ ಆಂಕೇರ್ ಪೂಲ್ ಪೂಜಾನ್ ಮೇಲ್ – **ಯಕ್ಕದ ಹೂ**

ಆಂಗ (ಕ್ರಿ)– ಮುಂಡಾಗ್, ಭವಿಷ್ಯತ್ ಆಂಗ ಆ – **ಮುಂದೆ**

ಆಂಗೇಮ ಆಯೇರೋ (ನಾ) – ಜೀವೇಮಾ ದೇವ್ ಭರಾಂಯೆರೋ, ಭೂತ್ ಭರಾಯೆರೊ. ಆಂಗೇಮ ದೇವ ಆವಾ –**ಮೈಯಲ್ಲಿ ದೇವರು**

ಆಂಗ – ಪಾಚ (ಕ್ರಿ) – ಮುಂಡಾಗ್ ಪಾಚ್.

ಆಂಗ್ – ಪಾಚ್ ದೇಕ್ – **ಹಿಂದೆ ಮುಂದೆ**

ಆಂಗಳಿ (ನಾ) – ಹಾತೇರ್ ಆಂಗಳಿ. ಆಂಗಳಿಮ ವೀಟಿ ಘಾಲ್ – **ಬೆರಳು**

ಆಂಚ್ (ಕ್ರಿ)– ಅಂಗಾರೇತಿ ಊಟಜಕೊ, ಬಳಜಕೊ. ಆಂಚ್ ಆಯೀ– **ಬಿಸಿ ಜ್ವಾಲೆ**

ಆಂಚಳೆ (ನಾ) – ಬೇಸಿರ್ ದೂದ್ ಕಾಡಜನ್ನ ಖಿಂಚೆರೊ ಆಂಚಳೇಮಾರೊ ದೂದ್ ಕಾಡ್– **ಕೆಚ್ಚಲು**

ಆಂತರ್–ಒಜರಿ (ನಾ) – ಗೋರ್ಲಿ–ಗೋರ್ಲ್ಲರ್

ಪೇಟೆಮಾಯಿರ್, ಸಳೋಯಿ ಕರೇನ್ ಚಾವಜಕೊ. ಆಂತರ್ – ಒಜರಿ ದೋ – **ಕಳ್ಳು ಪಚ್ಚಿ**

ಆಂಧಿ (ಕ್ರಿ)– ಧೂಡ್‌ವಾರ್ಡಾತಿ ಊಟಜಕೊ ವಾಳ್. ಆಂಧಿ ಆನ್ ಧೂಳ್ ಊಟೋ – **ಬಿರುಗಾಳಿ**

ಆಂದಿ (ಸ್ತ್ರೀ.ವಾ), ಆಂಕಿದಕಾಯಿನಿಜಕೊ ಬೀರ್, ತಾಂಡ್ರಿ, ಊ ಆಂದಿ ಹಾವ್ – **ಕುರುಡಿ, ಕಣ್ಣಿಲ್ಲದವಳು, ಕುಡ್ಡಿ**

ಅಂದಾಳಿ (ಕ್ರಿ)– ಆಂಕೀ ಫರನ್ ಮಾತೋಫರೇರೊ, ಆಂಕಿ ದುಂದ್ಲಿವೆರೊ. ಅಂದಾಳಿ ಆರಿಚ ಕಣ್ಣಚುಟ್ಟರೆ, – **ತಲೆಸುತ್ತುವದು.**

ಆಂದೊ (ಪುಲ್ಲಿಂಗ) – ಆಂಕಿದಕಾಯೇ ನಿಜಕೊ ಮರ್ದ್ ವೂ ಆಂಧೋ ಹಾವ್ –**ಕುರುಡ, ದೃಷ್ಟಿ ಹೀನ**

ಆಂಬ್ಲಿ (ನಾ)– ಲಗಾವ್‌ಣೀವ್‌ನಾ ಖಾಟೊವೇನಾ ಫಾಲಜಕೊ. ಆಂಬಲೀರ್ ಆಚಾರ್, – **ಹುಣಸೇಹಣ್ಣು**

ಆಂಬಾ (ನಾ) – ಝಾಡೇಪರ್ ಲಾಗಜಕೊ ಮಿಟೊ, ಖಾಟೊ ಫಳ್. ಆಂಬಾ ಖೋ – **ಮಾವಿನಹಣ್ಣು**

ಆಂಬ್ರಾ (ನಾ) – ಹೋಳಿಗಿ ಪರ್ ಧಾನ್ ಖಾಯೇನಾ ಕರಜಕೊ. ಆಂಬರಾ ಪೀ – **ಕಟ್ಟಿನ ಸಾರು**

ಆಂಸು (ನಾ) – ರೋವಜನ್ನ ಆಂಕಿಮಾತಿ ರಡೇರೊ. ಆಂಸು ಕಾಡ್ ಮತ್ – **ಕಣ್ಣೀರು**

ಆ ಕ (ಕ್ರಿ)– ಏಕ ಅದ್ಮೀನಾ ಬಲಾಕೇರೊ. ಓ ಅದ್ಮೀನಾ ಆ ಕ, ಬರಲು – **ಹೇಳಿ**

ಆಕಾರ್ (ಕ್ರಿ)– ಏಕ್ ರೂಪ್. ಆಕಾರ್ ಬದಲ್ – **ಆಕಾರ.**

ಆಕಾಸವಾಣಿ (ನಾ) – ಜೀವ್, ಆಕಾರ್ ಚೇನಿಜಿಂವ್ ದೂರೇತಿ ಸಾಂಬಳಜಕೊ ವಾತೇ. ಆಕಾಶವಾಣಿ ಸಾಂಬಳ್ – **ಆಕಾಶವಾಣಿ**

ಆಘಾತ (ಕ್ರಿ)– ಝುಟ್ಕಾಲಾಗ್ ಓನ ಆಘಾತ ವೇಗೊ – **ಆಘಾತ**

ಆಚಾರ–ವಿಚಾರ (ದ್ವಿರುಕ್ತಿ) – ಆದ್ಮೀರ್ ರೇಣ್‌ದೇಣ್. ಆಚಾರ–ವಿಚಾರ – ಠೀಕ್ ರೇದ್ – **ಧರ್ಮದ ಪಾಲನೆ**

ಆಚಾರಿ (ನ) – ಪೂಜಾ ಕರೇವಾಳೊ ಊ ಆಚಾರಿಹಾವ – **ಪೂಜಾರಿ, ಗುರು, ಆಚಾರ್ಯ**

ಆಚ್ಛೋ (ಗು.ವಿ) – ಟೀಕೇತಿ ದಕಾವಜಕೊ. ಆಚ್ಛೋ ಬನ್ – **ಒಳ್ಳೆಯ**

ಆಜ್ (ಕಾಲವಾಚಕ) – ಆಜೇರ್ ದಾಡೊ. ಆಜ ಮಾರ್ ವೀಯಾ – **ಇಂದು**

ಆಜೇತಿ (ಕ್ರೀ.ವಿ.) – ಆಜೇರ್ ದಾಡೊ, ಅಜೇರ್ ದಿವಸ್. ಆಜೇತಿ ತಾವ್ ನಂಗೋ, – **ಇಂದಿನಿಂದ**

ಆಜೋ (ಕ್ರಿ)– ಭೋರಾನ ಬಲಾಯರೊ. ಆತ್ ಆಜೋ – **ಬಾ**

ಆಜೋರೆ (ಪು.ವಾ) – ಭೋರಾನ್ ಹಕಾರೇರೊ ಒವ್ವಿ ಆಜೋರ – **ಬಾರಲೇ**

ಆಜೋಯೆ (ಸ್ತ್ರೀ.ವಾ)– ಭೋರೀನ ಬಲಾಯೆರೊ. ಜಲ್ದೀ ಆಜೋಯೆ – **ಬಾರೆ**

ಆಜೋನಿ (ಲ್) – ಮೋಟ್ ಅದ್ಮೀನ್ ಬಲಾಯೇರ್. ಆಜೋನಿ ಹೈಂಯ್ ಕಾ ಕರ್ರೋಚೆ – **ಬನ್ನಿ**

ಆಜ್ ರಾತ್ (ಕಾ.ವಾ) – ಆಜೇರ್ ದಾಡೇರ್ ರಾತ್. ಆಜ ರಾತ್ ಘರ್ ಆಜೋ – **ಇಂದು ರಾತ್ರಿ**

ಆಜು–ಬಾಜು (ದ್ವಿರುಕ್ತಿ) – ಎವ್ವಿ–ಓವ್ವಿ. ಆಜು–ಬಾಜು ಘಣ್ ಆದಮೀ ಛ – **ಅಕ್ಕ ಪಕ್ಕ**

ಆಟ್ (ಸಂ.ವಾ) – ಸಾತ್ ಆಟ್, ಗಣೇರೊ. ಆಟ್ ಆದಮೀ ಆಯೇ – **ಎಂಟು.**

ಆಟೋ (ನಾ) – ದಾಣಾನೊ ಫೇರಾವಜನ್ನ ವಜಕೊ. ಆಟೋ ಲಾ – **ಹಿಟ್ಟು**

ಆಡೋ (ಕ್ರಿ)– ಎಡವಟ್, ಶುದ್ಧೋಛೆನಿಜಕೊ ಆಡೋ ಜೋ – **ಅಡ್ಡ**

ಆಡೋ ಆಮತ್ (ಕ್ರಿ) – ಉಲ್ಟಾಕರ್ ಮತ್. ಆಡೋ ಆಮತ್ ಕರನ್ ಕ ಅಡ್ಡ – **ಬರಬೇಡಾ**

ಆಡೋ ಸಾಮ(ಕ್ರಿ) – ನಾಮ್ ಭೋಡನ್ ದುಸುರೊನಾವೇತಿ ಹಕಾರೇರೊ.

ಆಡೋ ನಾಮ ಲ ಮತ್ – **ಅಡ್ಡಹೆಸರು**

ಆಂಡಾ (ಗು.ವಿ)– ನಸಲ್ಯೊ, ಜಾಡೋ ಖಾಲ್ದೇರೊ. ಉ ಘಣೊ ಆಂಡಾಛ – **ಮೊಂಡ, ಹಠಮಾರಿ**

ಆಡ್‌ವಾಟ್ (ನಾ) – ವಾಟ್‌ಭೋಡನ್ ಆಡೋಜಾಯೇರೊ. ಆಡವಾಟೇನ ಆ **ಅಡ್ಡದಾರಿ**

ಆತ್ಮಾ/ಆತಮಾ (ಗು.ವಿ) – ಜನಮ್, ಜೀವ್. ಆತ್ಮ ಠೀಕ್ ರೇದ್, – **ಆತ್ಮ**

ಆತಾಣೆನ ಜಾವೋ (ಕ್ರಿ) – ಏಕ್ ಹಪ್ತಿ ಫರೊ. ಆನ ಜೋ, – **ಬಂದು ಹೋಗಿ.**

ಆತ್ಮಹತ್ಯಾ (ಕ್ರಿ) – ಖುದ್‌ಖುಷಿ, ಓರ್‌ಊಜ್ ಮರೇರೊ, ಭೋರ ಆತ್ಮ ಹತ್ಯ ಕರಲಿದೋ – **ಆತ್ಮಹತ್ಯೆ**

ಆತ್ಮವಿಶ್ವಾಸ (ಗು.ವಿ.) – ಘಟ್ಟೋಮನ್ಸ್ ಕರೇರೊ ಆತ್ಮವಿಶ್ವಾಸ ರೇಣು – **ಆತ್ಮ ವಿಶ್ವಾಸ**

ಆತ್ಮ ಸಮರ್ಪಣ (ಕ್ರಿ) – ಓನ್‌ವೂಜ್ ಒಪ್ಪಸ್ ಲೇರೊ. ಆತ್ಮ ಸಮರ್ಪಣ ಕೀದೊ – **ತನ್ನನ್ನು ತಾನು ಸಮರ್ಪಿಸಿಕೊಳ್ಳುವುದು.**

ಆದತ್ (ಗು.ವಿ.) – ಹೇವಾ, ರೂಢಿ, ತೋನ ಆದತ್ ಪಡಗೀಚ್ – **ಸ್ವಭಾವ ರೂಢಿ, ಅಭ್ಯಾಸ**

ಆದರಣೀಯ (ಗು.ವಿ) – ಮೋಟ್ ಆದ್ಮಿನ ಬಳಸಜಕೊ. ಆದರಣೀಯು ಛ ಗೌರವಾನ್ವಿತ, **ಆದರಣೀಯ ಸನ್ಮಾನ್ಯ**

ಆದರ್ಶ (ಗು.ವಿ.) – ದುಸ್‌ರೇನ ದೇಕನ್ ಸೀಕಜಿಂವ್ ವೇರೊ. ದುಸರೋಣನ ಆದರ್ಶರೇಣು – **ಆದರ್ಶ.**

ಆದ್ (ಸಂ.ವಾ) – ಅದೋ, ಪೂರಾಕಾವ್ ಜಕೊ ಆದೋಕರ್ – **ಅರ್ಧ**

ಆದಮೀ (ನಾ) – ಮಾಣಸ್. ಆದಮೀ ವೇನ ಬಚ್ – **ಮನುಷ್ಯ.**

ಆದಾರ (ಕ್ರಿ)– ಅಪಣಜ್ ಹಾವ್ ಕೇನ್ ಛಜಕೊ ಘರೇರ್ ಬುನಾದಿ. ಆದಾರ್ ರಕಾಡ್, – **ಆಧಾರ, ಬುನಾದಿ.**

ಅದೋ ಅದುರೋ (ಗು.ವಿ.) – ಅಪಾಯಿಜ್. ಆದೋ ಅದೂರೊ ವೆಗೋ, – **ಅರ್ಧಮರ್ಧ**

ಆನಂದ (ಗು.ವಿ) – ಮನ್ಸೇನ್ ಅಛ್ಯೊ ಲಾಗೇರೊ, ಆನಂದವೇಗೋ, – **ಆನಂದ**

ಆನಿಯೇ (ಸಂಬೋಧನಿಯ) – ತಾಂಡ್ರೇನ್ ಬಲಾ, ಭೋರಿನ್ ಬಲಾಯೇರ್. ಆತ ಆನಿಯೇ – **ಬಾರೇ**

ಅನ್ಯಾಯ (ಕ್ರಿ) – ಏಕೇರ್ ಅವಕಾಶ್ ಖೋಸ್ಲೇರೊ, ಅನ್ಯಾಯ ಮತ್‌ಕರ್ – **ಅನ್ಯಾಯ**

ಆಪತ್ (ಕ್ರಿ)– ತೊಂದ್ರಿ, ಅಡಚಣ್. ಆಪತ್ ಆನಪಡೊ, – **ಆಪತ್ತು**

ಆಬರೂ (ಗು.ವಿ.) – ನಾನ್ಕ್ಯಾವೇರೊ. ಆಬರೂ ಕಾಡೋ – **ಪ್ರತಿಷ್ಠೆ, ಮರ್ಯಾದೆ, ಮಾನ**

ಆಮನೆ–ಸಾಮನೆ (ದ್ವಿರುಕ್ತಿ) ದೀ ವೇನಿಜಕೊ ಭಳೇರೊ. ದೋಯಿ ಆಮನೆ – ಸಾಮನೆ ವೇಗ್ – **ಮುಖಾ–ಮುಖಿ, – ಪ್ರತ್ಯಕ್ಷವಾಗಿ, ಸಮ್ಮುಖ**

ಆ ಮತ್ (ಕ್ರಿ) – ನ ಬಲಾಯೇರೊ. ಆ ಮತ್ ತೂ – **ಬರಬೇಡ**

ಆಮ್ಲಿ (ನಾ) – ಲಗಾವಣೇಮಾ ಘಾಲೇರ್, ಖಾಟ್. ಆಮ್ಲೀರ, ಅಚಾರ್ – **ಹುಣಸೇ ಹಣ್ಣು.**

ಆಮ್ಲೀರ ಬೀಜಾ (ನಾ) –ಆಮ್ಲಿಮ್ ರಜಕೊ, ಚಾವಿರಮೇನ್ ಬಳಸಜಕೊ. ಆಮ್ಲೀರ ಬಿಜಾ ಭೂಂಜ್ – **ಹುಣಸೇ ಬೀಜ**

ಆಮ್ಲೀರ್ ಝಾಡ್ (ನಾ) – ಆಮ್ಲಿ ಲಾಗಜಕೊ, ಭೂತ್ ವಾಸಕರಚ್ಕೇನ್ ಪೇನಾ ನಂಬಮೇಲಿಜಕೊ. ಆಮ್ಲಿರ ಝಾಡ್ ಪಚಾ – **ಹುಣಸೇಮರ**

ಆಯೊ (ಕ್ರಿ) – ಕೋಯಿ ಹಕಾರಜನ್ನ ಆಂವ್‌ಚುಕೇರೊ. ಆಯೋ ಥಾಮ್ – **ಬಂದೆ**

ಆಯುಷ್ಯ (ಗು.ವಿ.) – ಅತ್ತರಾಜ್ ವರಸ್ ಕೇನ್ ಬಂಚೇರೊ. ಆಯುಷ್ಯ ವೇಗೊ – **ವಯಸ್ಸು/ಆಯುಷ್ಯ**

ಆಯೇರೋನ್ – ಜಾಯೇರೋ (ದ್ವಿರುಕ್ತಿ),

ಜೋಕಾಲಿ, ಬಾಳರ್ ತೊಟ್ಲ. ಆಂಬೆರೋನ್ ಜಾಂಯೇರೋನ್ ಕರ್ರೋಚ. – **ಬಂದು–ಹೋಗು.**

ಅರ್‌ಪಾರ್ (ಕ್ರಿ)– ಮನ್ಸೇವ್ ಖೋಟ್ ಚೇನಿಜಕೊ, ಎವ್ಡಿತಿಒವ್ಡಿದಕಾಯೇರೊ. ಆರ್ ಪಾರ್ ವೇಣು – **ಅರಪಾರ**

ಆರ್ ಅತ್ತ್ (ಸಂಭೋಧನಾ ವಾಚಕ), ಬಲಾಯೇರೊ, ಏ ಆರ್ ಅತ್ತ್ – **ಬಾರೋ**

ಆರಾಲೇನ ಗಸ್ಸ್ (ಕ್ರಿ) – ಲೋಯೇನಾ ಅಳಾಯೇರೊ. ಆರಾಲೇನ್ ದಾತ್ಲಾ ಗಸ್ಸ್ – **ಅಸ್ತ್ರಗಳನ್ನು ಹರಿತ ಗೊಳಿಸುವುದು**

ಆರತಿ (ಕ್ರಿ) – ದೀವ್ಲೊಲಗಾಡನ್ ದೇವೇನ್ ಬೆಳೆಗೆರೊ, ಆರತಿ ಊತಾರ್ – **ಆರತಿ ಮಂಗಳಾರತಿ**

ಆರಾಮ್ (ಕ್ರಿ) – ಆಡೋಪಡ್, ಜಮೀಪರ್ ಲೇಟೇರೊ, ಆರಾಮ್ ಕರ್, ಆರಾಮು/ – **ಆನಂದ, ನೆಮ್ಮದಿ/ಆರೋಗ್ಯ.**

ಆರೋಪ್ (ಕ್ರಿ) – ಏಕ್ ಅದ್ಮೀಪರ್ ಗಚಬ್‌ಗಚಬ್ ಲಬಾರಿಕೇರೊ. ಆರೋಪ್ ಲಗಾಮತ್, – **ಆರೋಪಿಸು**

ಆರೋಪಿ (ನಾ) – ತಪ್ಪ್ ಕರಮೇಲೊಜಕೊ. ವೊ ಆರೋಪಿ ಹಾವ್ – **ಆರೋಪಿ**

ಆರಾಮಕುರ್ಚಿ(ನಾ) – ಪೂರಾ ಲೇಟ್ ಜಾಯೇರೊ, ಆರಾಮಕುರ್ಚಿ ಪರ್ ಬೇಟೋ – **ಆರಾಮಕುರ್ಚಿ**

ಆರಸಿ (ನಾ) – ಮುಂಡೋದೇಕೆರ್, ಆರಸಿ ದೇಕ್ – **ಕನ್ನಡಿ, ದರ್ಪಣ**

ಆಲಸಿ (ಕ್ರಿ)– ಹೇಟೇತಿ ಊಟೆನಿಜಕೊ. ಊ ಆಲಸಿ ಆದ್ಮಿ ಹಾವ್ – **ಸೋಮಾರಿ, ಮೈಗಳ್ಳ**

ಅಲ (ಕ್ರಿ) – ದೇರೊ, ಪೀಸಾ ಅಲ್ರಾ, **ತಗೊ**

ಅಲೆ (ಸ್ತ್ರೀ.ವಾ.) – ಭೋರಿನಾ ಕಾಂಯಿತೊಯಿ ದೇರೊ. ಅಲೆ ಭೋರಿ. – **ತಗೊಳೆ**

ಅಲ್ರೇ (ಪು.ವಾ)– ಭೋರಾನ ಕಾಂಯಿತೊಂವ್ ದೇರೊ. ಅಲ್ರೇ ಭೋರಾ – **ತಗೊಳೊ**

ಆಲೂಗಡ್ಡ (ನಾ) – ಲಗಾವಣೇವರ್ ಫಾಲಜಕೊ ತರಕಾರಿ. ಆಲೂಗಡ್ಡ ರಾಂದ್, – **ಆಲೂಗಡ್ಡೆ, ಬಟಾಟೆ**

ಆವಾರಾ (ಕ್ರಿ) – ಕಾಮ್‌ಕಾಜ್ ಛೇನಿಜಿಂವ್ ಹಿಂಡೆವಾಳೊ. ಆವಾರ ವೇಗೋ, ಸಂಚಾರಿ, ತಿರುಕ, – **ತುಂಟ, ಪುಂಡ ಪೋಕರಿ**

ಆವಾಸ (ನಾ) – ಘರ್, ರೇರೊ, ವಸೇರೊ. ತಾರ್ ಆವಾಸ ಕತ್ – **ನಿವಾಸ, ಆವಾಸ.**

ಆವಗೋ (ಕ್ರಿ) –ಆಯೇರೊ, ಆಯೋಕೇನ್ ಒಪ್ಪೇರೊ. ತಮೇನ ಆವಗೋ – **ಬಂದಿತ್ತು.**

ಆವೋ (ಕ್ರಿ) – ಫಣ್ ಆದ್ಮಿ ರಜೇನಾ ಬಲಯೇರೊ, ಆವೋ ನಿ – **ಬನ್ನಿರಿ**

ಆಶಿಸ್ (ಕ್ರಿ) – ಮೋಟ್ ಆದ್ಮಿ ನಾನ್ಕ್ಯಾವೂನ್ ಆಶಿಸ್ ದೇರೊ. ಆಶಿಸ್ ಮಾಂಗ್ – **ಆಶೀರ್ವಾದ**

ಆಸಾಖೋರಿ (ನಾ.ವಿ) – ಅಜ್ಜೇಕೇರ್ ಚೀಜೇನ ಅಸಾಕರೆವಾಳೊ. ವೊ ಆಸಾಖೋರಿ ಹಾವ್ ಹೊಟ್ಟೆಬಾಕ – **ಆಶೆಪಡುವವ.**

ಆಶ್ಚರ್ಯ (ಕ್ರಿ) – ಚಕ್ಪೊಂದ್ ವೇರೊ. ಆಶ್ಚರ್ಯ ವೇಗೋ, ಆಶ್ಚರ್ಯ, ಅಚ್ಚರಿ

ಆಶ್ವಾಸನ್ (ಕ್ರಿ) – ಝೂಟಿ ತಸ್ಸಲ್ಲಿ ದೇರೊ. ಆಶ್ವಾಸನೇತಿ ಪೇಟ ಭರಾಯೇನಿ – **ಆಶ್ವಾಸನೆ, ವಾಗ್ದಾನ**

ಆಷಾಡ್ (ನಾ)– ವರಾಸ್, ರಾಗಿ ಬೋಯೇರ್ ದಾಡ್, ಆಷಾಡೇಮ್ ಮ ಕಾಂಯಿನಕರಣು – **ಆಷಾಡ ಮಾಸ**

ಆಸ್ರೋ (ಕ್ರಿ) – ಏಕಾದೀನ್ ಹಾತೇತಿ ವ ಆತ್ರಾ ದೇರೊ, ವಾ ಬಾಪೇನ್ ದೇಕೆರೊ. – **ಆಶ್ರಯ, ಆಸರೆ.**

ಆಸಾನ್ (ಕ್ರಿ) – ಸರಳ್, ಸುಲಭ. ಆಸಾನೇರ ಕಾಮ್ – **ಸುಲಭ, ಸರಳ.**

ಆಸಾಮಿ (ನಾ) – ಮಾಣಸ್, ಆದ್ಮಿ. ಆಚ್ಚೊ ಆಸಾಮಿ ಹಾವ್ – **ವ್ಯಕ್ತಿ**

ಆಸಾ (ಕ್ರಿ) – ಮನೆಮಾಯೇರ್ ಏಕ್ ಭಾವ್, ಲೋಭಿ. ಆಸಾ ಮತ್ ಕರ್ – **ಆಸೆ, ಕಾಮನೆ, ಬಯಕೆ**

ಆಸ್– ಪಾಸ್(ದ್ವಿರುಕ್ತಿ) – ಫೇರನ್.

ಆಸ್‌ಪಾಸ್ ಕೋಯಿ ಛೇನಿ– **ಹತ್ತಿರದಲ್ಲಿ, ಅಕ್ಕಪಕ್ಕ**

ಆಸ್ಮಾನ್(ನಾ)–ಮಾಡ್, ದಾಡೊ. ಆಸ್ಮಾನೇರ್ ಉಪೂರ್. – **ಆಕಾಶ ಸ್ವರ್ಗ**

ಆಸ್ತ (ಕ್ರಿ) – ಹಳೀಕನ್, ಹೊಳಿಕನ್. ಆಸ್ತಾ ಆ **ನಿಧಾನವಾಗಿ.**

ಆಸ್ಥಾನ್ (ನಾ) – ಮೋಟ್‌ಜಾಗ್, ರಾಜೇರ್ ದರ್ಭಾರ್. ರಾಜೇರ್ ಆಸ್ಥಾನ್ – **ಆಸ್ಥಾನ ದರಬಾರು**

ಆಹ್ವಾನ್ (ಕ್ರಿ)– ಬುಲಾವ್, ಬಲಾಯೇರ್. ಆಹ್ವಾನ್ ಆಯೀಚ್ – **ಆಹ್ವಾನ**

ಇ

ಇಂಡಾ(ನಾ) – ಕುಕಡಿಮೇಲಜಕೊ. ಇಂಡಾರಾಂದ್ – **ಮೊಟ್ಟೆ**

ಇಕ್ಕಾ (ನಾ) – ಪಕಡ್, ಸೂಕ್ಷ್ಮ ಛಜೇನ್ ಕಿಚೇರೊ. ಇಕ್ಕಾತಿ ಪಕಡ್ – **ಇಕ್ಕಳ**

ಇಂಗ್ಳಿ (ನಾ) – ಕಾಳೋವೀಂಚೂ. ಇಂಗ್ಳಿ ಕಾಟಿಚ್ – **ಕರಿಚೇಳು**

ಇಕ್ಲ (ನಾ) – ಖಡ್‌ಒಟ್ಟೇರೊ. ಖಡೇರ್ ಇಕ್ಲಫಾಲ್ – **ಹುಲ್ಲುವೊಟ್ಟು**

ಇಚ್ಛಾ, (ಕ.ಶ) (ನಾ.ವಿ) – ಮನೆ ಮಾಯೇರ್. ಇಚ್ಛಾ ಕಾಂಯಿ ಕೋರಿಕೆ, – **ಇಚ್ಚೆ, ಬಯಕೆ**

ಇಂಜನ್ (ಇಂಗ್ಲಿಷ್) (ನಾ) – ಅಂಜನ್, ಗಾಡಿ ಕಿಚೇರ್. ಇಂಜಿನ್ ಗಾಡಿ ಖೀಚರೀಚ್ – **ಇಂಜಿನು**

ಇಜ್ಜತ್ (ನಾ.ವಿ) – ಮಾನ್. ಇಜ್ಜತ್ ಕಾಡಮತ್ – **ಗೌರವ, ಮರ್ಯಾದೆ**

ಇಜ್ಜತ್‌ದಾರ್(ನಾ.ವಿ) – ಮರ್ಯಾದಿವಾಳೊ.

ಇಜ್ಜತ್‌ದಾರ ಬನ್, – **ಮರ್ಯಾದಸ್ಥ**

ಇತ್‌ವಾರ್(ವಾರಸೂಚಕ) – ದಿತ್‌ವಾರ್ ಆಜ್ ದಿತ್‌ವಾರ್ ಛ – **ಆದಿತ್ಯವಾರ**

ಇಟೆಂಗಿ (ನಾ) – ಇಟ್, ಹೆಂಡಿ. ಇಟೆಂಗಿ ತೀ ಘರ್ ಭಾಂದ್, – **ಇಟ್ಟಿಗೆ**

ಇಂಡಾ (ನಾ) – ಕುಕ್ಕಡಿ ಮೇಲಜಗೊ ಕುಕಡೀರ್ ಇಂಡಾ – **ಮೋಟ್ಟೋ**

ಇತಿಹಾಸ (ಗಾ.ವಿ) – ಪುರಾನ, ಪಿಚ್ಲೆ ಜನಮೇರ್ ಲಕಣಿ, ಹೋಟೇರ್ ಘಟ್ನಾವಳಿ. ಇತಿಹಾಸ ಪಡೋ ಚರಿತ್ರೆ, – **ಇತಿಹಾಸ.**

ಇತಿಹಾಸ್‌ಕಾರ್ (ನಾ) – ಪಾಚೇರ್ ಲಕಣಿ ಲಕೇವಾಳೊ, ಇತಿಹಾಸ್‌ಕಾರ್ ಇತಿಹಾಸ್ ಕೋನಿ, ಲಕ್ಕೊ ಚರಿತ್ರೆಕಾರ – ಇತಿಹಾಸಕಾರ.

ಇನ್‌ಸಾನ್(ನಾ),(ಹಿ.ಶ) – ಆದ್ಮಿ ಇನ್‌ಸಾನ್, ಠೀಕ್ ಛ, **ಮನುಷ್ಯ.**

ಇಮಾರತ್ (ನಾ), ಕನ್ನಾಯಿ ಬೂಡೇನಿಜಕೊ ಮೊಟೊ ಕಟ್ಟಡ. ಮೋಟೊ ಇಮಾರತ್ – **ಬನಾ ಕಟ್ಟಡ**

ಇಮಾನ್‌ದಾರ್ (ನಾ.ವಿ.) – ನಂಬಿಕಿವಾಳೊ. ಮಾ ಇಮಾನ್‌ದಾರ್ ಭೂ – **ನಂಬಿಕೆಯುಳ್ಳ ಮನುಷ್ಯ, ಪ್ರಾಮಾಣಿಕ ವ್ಯಕ್ತಿ.**

ಇಮಾನ್‌ದಾರಿ (ನಾವಿ) – ವಿಶ್ವಾಸೇತಿರೇರೊ, ಖೋಟ್‌ಛೆನಿಜಿಂವ್‌ವೇರೊ. ಇಮಾನ್ ದಾರಿತಿ ರೇಣು ನಂಬಿಕೆ – **ಪ್ರಾಮಾಣಿಕತೆ.**

ಇರಾದ (ನಾ.ವಿ)– ಮನಸ್ ಕರೇರೊ. ತಾರ್‌ಇರಾದ ಕಾಂಯಿ ಛ – **ಇಚ್ಛೆ.**

ಇಲಾಜ್ (ಕ್ರಿ) – ಘಾವ್‌ೀನ್ ಮಲಾವಮ್‌ಲಗಾಡೇರು, ಖಾಯಿಲೆ ವಾಸಿಕರೇರೊ.ಇಲಾಜ್ ಕರಾವೋ – **ವೈದ್ಯ ಚಿಕಿತ್ಸೆ, ಶುಶ್ರೂಷೆ, ಔಷಧ ಪರಿಹಾರ.**

ಇಲಾಚಿ (ನಾ) – ಘಮ್ಮೋ ವಾಸ್ನಿ ದಜಕೊ ಡೋಡಾ. **ಇಲಾಚಿ ಖೋ** – **ಏಲಕ್ಕಿ.**

ಇಷ್ಕ್ (ನಾ) (ಹಿ.ಶ) – ಪ್ರೇಮ್, ಪ್ರೀತಿ. ಮನ್ ಇಷ್ಕ್ ವೇಗಿ – **ಪ್ರೇಮ**

ಇಶಾರಾ (ಕ್ರಿ)(ಹಿ.ಶ) – ದಕಾಳೆರೊ. ಇಶಾರಾ ಕರ್ – **ಸಂಕೇತ, ಸೂಚನೆ, ಸುಳಿವು.**

ಇಸ್ತರಿ (ಕ್ರಿ)– ಲತ್ತಾರ್ ಸುಕ್ ಕಾಡೇರ್ ಲತ್ತ ಇಸ್ತರಿ ಕರ್ – **ಬಟ್ಟೆಯನ್ನು ಇಸ್ತ್ರಿ ಮಾಡುವುದು.**

ಇಸ್ತೆಮಾಲ್(ಕ್ರಿ)(ಹಿ.ಶ)–ಅಪ್ಣಕಾಮೇನ್ ಏಕಾದೀನ್ ಬಳಸೇರೊ, ಆದಮೀನ ಇಸ್ತಮಾಲ ನಕರನು – **ಉಪಯೋಗ, ಬಳಕೆ, ರೂಢಿ.**

ಈ

ಈ (ಸಂ.ವಾ)– ಸೆಮನ್, ಆದ್ಮಿನ ಗುರ್ತ್ ಪಕಡೇರೊ. ಈ ಕ.ತೂ. ಪೂಚೊ, ಜಕೇ – ಇದು.

ಈಜ್ (ಸಂ.ವಾ) – ಏಕ್ ಚೀಜೇನಾ ಹಾವ್ ಕೇರೊ, ಆದ್ಮೀನ ಪಕ್ಕಾ ಗುರ್ತ್‌ಪ ಕಡೇರೊ, ಈಜ್ ಹಮಾರ್ ಘರ್, ಇದೆ.

ಈಜ್‌ಹಾವ್ ಕ ? (ಪ್ರವಾ) – ಈಜ್ ಹಾವ್, ಓಳ್ಕೆಸಾರೊ ಪ್ರಶ್ನೆಪುಚೇರೊ, ಈಜ್ ಹಾವ್ ಕ ಊಆದ್ಮಿ – **ಇದೆ ಹೌದಾ?**

ಈ ಕಾಂಯಿ ಹಾಂವ್ (ಪ್ರವಾ) – ಪುಚೇರೊ, ಕುತೂಹಲೇತಿ ಪುಚೇರೊ. ಈ ಕಾಂಯಿ ಹಾವ್ ಅಸೊ – ಇದೇನು?

ಈ ಕೂಣ್? (ಪ್ರ.ವಾ)– ವಾಾಲವಾ್ ಭೇನಿಜೇರ್ ಬಾರೆಂ ಪುಚೇರೊ. ಈ ಕೂಣ್ ಹಾವ್ – **ಇವರ್‍ಯಾರು?**

ಈ ಕತ್ (ಪ್ರವಾ) – ಅನುಮಾನ್ ಛಜೇ ಸಾಮಾನೆ ಪುಚೆರೊ.ಈ ಕತ್‌ಮೇಲೋಚಿ – ಇದು ಎಲ್ಲಿ ?

ಈ ಮತ್ (ನಿಷೇಧಾರ್ಥಕ) – ಚಾಯೇನಿಜೆನ್ ನಕಾರೇರೊ. ಈ ಮತ್ ಮನ್ಸ್ – **ಇದು ಬೇಡ**

ಈಲಾ (ಸಂಬೋಧನೀಯ) – ಹರ್‌ದ ಅಯೇನಿಜೇನ್ ಪೂಚೇರ್. ಈ ಲಾತೊ **ಇದು ತಾ**

ಈದ (ಸಂಬೋಧನೀಯ) – ದಕಾಳನ್ ದಕೇನ್ ಪುಚೇರ್. ಈ ದ ತೋ – **ಇದನ್ನು ಕೊಡು.**

ಈಜ್ ತೋ (ಸಂಬೋಧನೀಯ) – ಸೆಮಾನ್ ದಕಾಳನ್ ಒಪ್ಪೇರೊ. ಈಜ್ ತೋ ಊ. **ಇದೇ ತಾನೆ.**

ಈ ಕೇನ್? (ಪ್ರ.ವಾ) – ಕೇನ್ ಕರನ್ ಪೂಚೆರೊ. ಈ ಕೇನ್ ದೇಗೊ ? **ಇದು ಯಾರಿಗೆ**

ಈ ಕೋಣ್ ಕಿದೊ? (ಪ್ರವಾ) – ಕಾಂಯ್ ತಾರಿ ಕಿದೇಜೇನ್ ಪೂಚೆರೊ. ಈ ಕೂಗ್‌ಕಿದೊಜಕೊ ಹಾವ್ – **ಇದು ಯಾರು • ಮಾಡಿದ್ದು.**

ಈ ಪಾಡ್(ಕ್ರಿ) – ಸೇಮನ್ ದಕಾಳನ್, ಪಾಡ್ ಕೆರೊ, ಈ ಪಾಡ್ ತಾಣಿ ಉಪ್ಪರ್ ಮೇಲ್ – **ಇದನ್ನು ಎತ್ತು.**

ಈ ಕಾಡ್ (ಕ್ರಿ) – ಸೆಮನ್ ದಕಾಳನ್ ಕಾಡ್ ಕೆರೊ, ಈ ಕಾಡ್‌ತೊ – **ಇದನ್ನು ತೆಗೆ**

ಈ ಕರ್‌ಮತ್ (ಕ್ರಿ) – ಏನ್‌ಕರ್‌ಮತ್. ಈ ಕರ್‌ಮತ್ ದೇಕ್ – **ಇದನ್ನು ಮಾಡ ಬೇಡ.**

ಈ ಖೋಮತ್ (ಕ್ರಿ) – ಏನ್‌ಮತ್‌ಖೊ ಕೇರೊ. ಈ ಖೋಮತ್ ಊಖೋ. **ಇದನ್ನು ತಿನ್ನಬೇಡ.**

ಈಮ್ (ದೂ.ವಾ) – ಕೆವ್ಡಿಕೊ. ಈಮ್ ಗೋಚ್, **ಎಲ್ಲೋ.**

ಉ

ಉ (ಪುರುಷ ವಾಚಕ) – ಆದ್ಮಿದಕಾಳೇರ್. ಉ ಮಾರ್‌ಭಾಯಿ. ಅವನು, **ಅವನು ನನ್ನ ತಮ್ಮ.**

ಉಕಡ್,ವಕೋಡ (ನಾ) – ಜಡೇತಿ ಅಲಗ್‌ಕರೇರೊ. ಉಕೋಡ್ – **ಬೇರು ಸಹಿತ ಕೀಳು, ಕಿತ್ತೊಗೆ, – ಹಾಳುಮಾಡು**

ಉಕಾಳೋ (ಕ್ರಿ) – ವಕಾಳೋ, ಅಂಗಾರ ಪರವೇಲನ್ ಸಿಜಾಡೇರ್. ಘಳಿ ಉಕಾಳೋ, – **ಕುದಿಸು.**

ಉಜ್ (ಸೂ.ವಾ) – ಗುರ್ತ್‌ಪಕಡ್, ಸ್ಪಷ್ಟೇತಿ ಕೇರೊ. ಉಜ್ ಘರ್ ಮಾರೊ–**ಅದೇ**

ಉಂಗ್(ಕ್ರಿ)– ನೀಂದ್ ಆವಜನ್ನಾ ಬೇಸನ್ ನೀಂದ್ ಕರೇರೊ, ಉಂಗ್‌ಮತ್ – **ತುಗಡಿಸು.**

ಉಗಾಡ್ (ಕ್ರಿ) – ವಗಾಡ, ಮಾಟ್ಲಾಪರೇರ್ ಚಿಪ್ಪಾಕಾಡೇರ್, ಬಾಕ್ಲೋ ಉಗಾಡ್ – **ತೆರೆಯುವುದು**

ಉಟ್ (ಕ್ರಿ) – ಬೇಸಜೇನ್ ಕೆರೊ. ಊಪರ್ ಉಟ್ ಏಳು, ಇಲ್ಲಿ ಬರ್ಲಿ ಮೆಲೇಳು, **ಉಂದರ್** (ಕ್ರಿ), ಘರೇವಾಾ ದಾಣಾಖಾಯ ವಾಳೊ. ಉಂದರ್ ಘಣ್ ಛ – **ಇಲಿ.**

ಉಂಡೊ (ಕ್ರಿ) – ಉಲ್ಟಾ, ಮುಂಡೊಹೇಟ್ ಕರ್ನ್ ಸೊ ಯೆರೊ. ಉಂದೋ ಸೋಮತ್ – **ಬಕ್‌ಬರ್ಲೆ.**

ಉಡದಾಳ್ (ನಾ)– ವಡೇರದಾಳ್. ಉಡದಾಳ್ ದೋಸಿವನ್ ಫಾಲ್ – **ಉದ್ದಿನಕಾಳು,**

ಉತರೇರೋ (ಕ್ರಿ) – ಮೋಟ್ ಪದವೀತಿ ಹೇಟ್ ಉತರೇರೊ. ಹೇಟ್ ಉತರೇರೊ ಫಣೋಕಷ್ಟ – **ಇಳಿಯುವುದು, ಕಡಿಮೆಯಾಗು, ಕುಗ್ಗು, ಅವನತಿ ಹೊಂದು**

ಉತರ್ (ಕ್ರಿ) – ಹೇಟ್ ಆಸಯೇರೊ. ಹೇಟ್‌ಉತರ್ ಇಳಿ – **ಕೆಳಗಿಳಿ**

ಉತ್ತರ್ (ಕ್ರಿ) – ಪುಚಜೆ ಪ್ರಶ್ನೇನಾ ಬೊಲೇರೊ, ಉತ್ತರ್ ದಿಕ್. ಮಾರ ಪ್ರಶ್ನೀನ್ ಉತ್ತರ್‌ದ – **ಉತ್ತರ ದಿಕ್ಕು, ಉತ್ತರ**

ಉತ್ಪತ್ತಿ (ಕ್ರಿ) – ಉಗಾ. ಉತ್ಪತ್ತಿಕರ್, **ಹುಟ್ಟಿಸು, ಬೆಳೆ.**

ಉತ್ಪನ್ನ (ಕ್ರಿ) – ಪಚಾ, ಅಬ್ಬೇರ್ವಣ ಕಾಂಯಿ ಉತ್ಸನ್ನ ಥೇನಿ – **ಉತ್ಪನ್ನ**

ಉತ್ಸಾಹ (ಕ್ರಿ) – ಮನೇರ್ ಮಾಂಯಿರ್ ಏಕ್‌ಬಾವ್. ಉತ್ಸಾಹ್ ರಕಾಡ್ – **ಉತ್ಸಾಹ.**

ಉದಾಸ್ (ಗು.ವಿ.) – ದುಃಖೀ, ಕಾಮೇಪರ್ ಆಸಕ್ತಿ ಥೇನಿಜಿಂವ್ ವೇರೊ – **ನಿರಾಸೆ**

ಉದಾಸ್ – ಮತ್ತ್‌ರ ದು:ಖ ನಿರಾಸಕ್ತ – **ಉದಾಸೀನ ಪ್ರವೃತ್ತಿ**

ಉದಾರ (ಕ್ರಿ) – ವದಾರ್, ಹಾತ್ ಬೋಲಿ, ಕುಚ್‌ವಕ್ತೆಸಾರು ವದಾರ್‌ಮಾಂಗೇರೊ. ವದಾರ್‌ದೇರೊಕೊಂತಿ – **ಸಾಲ ಕೊಡುವುದು.**

ಉದ್ಧಾರ್ (ಕ್ರಿ) – ಆಂಗ್ ಆಯೆರೊ, ಕಮಾಯೇರೊ. ಉದ್ದಾರ್ ಕರ್ – **ಉದ್ಧಾರ ಮಾಡು.**

ಉದೇಡೇರೋ (ಕ್ರಿ) – ವದೋಡೇರೊ, ಸಿಡ್ಮಿಲೆಜೇನ ವಕಡೇರೊ, ದೋರಾ ವಕೋಡೆರೊ. ದೊರಾವದೋಡ್ ಹೊಲಿಗೆ ತೆಗಿ, – **ಬಿಚ್ಚು.**

ಉಪಕಾರ್ (ಗು.ವಿ) – ಕೇನಿ ಹಾತೇತಿ ವಳಿತ್ರಾ ದೇರೊ. ಉಪಕಾರ್ ಕರ್ ಉಪಕಾರ, – **ಸಹಾಯ.**

ಉನ್ಯಾ (ಕ್ರಿ) – ತಾವಡೇಮಾ ಹಿಂಡಜನ್ನಾ ವೇರೊ, ನೀತ್ ಕರಜನ್ನಾ ಬಳೇರೊ. ಉನ್ಯಾ ವೇರೊ ಚ, – **ಕಾವು.**

ಉಪರ್ (ನಾ) – ಎತ್ರಾರ್ ಜಾಗೇಪರ್, ಸೀಂಕೇಪರ್ ಸೆವುನ್ ಮೆಲೇರೊ. ಉಪರ್ ಬೇಸ್ – **ಮೇಲೆ**

ಉಪಕಾರಿ (ಗು.ವಿ), ದೂಸರೂನ್ ಭಲಕರೇವಾಳೊ, ಉಪಕಾರಿ ಬನ್ ಸಹಾಯಕವಾದ –**ಸಹಾಯ ಮಾಡುವವ, ಉಪಕಾರಿ**

ಉಪದೇಶ್ (ಕ್ರಿ) – ಸೀಕ್, ಒಳಕ್, ಜ್ಞಾನ್ ದೇರೊ, ಉಪದೇಶ್ ಲ – **ಸಲಿಹೆ ಉಪದೇಶ**

ಉಪಣಗಿ (ಕ್ರಿ) – ಅಂಗಾರೇರ್ ಕಾವೆತಿ ಧಾನ್, ದೂದ್ ಊಪರ್ ಆಯೇರೊ. ಮಾಂಡ್ ಉಪಣಗಿ – **ಉಕ್ಕಿ ಹರಿ, ಪ್ರವಾಹ, ನೆರೆ.**

ಉವಸ್ತ್ರ (ಗು.ವಿ.) – ವಂರುಸ್, ಮೋಟೊವೇರೊ. ವಿಯಾರ್, ಉಮ್ರ ಆವಗಿಚ್– **ವಯಸ್ಸು.**

ಉಲ್ಟಾ (ಕ್ರಿ) – ಹೇಟರ್ ಊಪರ್ ಉಪರೇರ್ ಹೇಟ್ ವೆರೊ, ಉಲ್ಟಾಕರ್– **ತಲೆಬುಡವಿಲ್ಲದೆ, ಅಸಬಂಧ್ದ.**

ಉಲ್ಟಿ (ಕ್ರಿ)– ಪೇಟೆವಾ ಖರಾಬತೊ ಮಾಂಯ್ತಿ ಭಾರ್ ಆಯೇರೊ. ಉಲ್ಟಿ ವೇಗಿ, – **ವಾಂತಿ.**

ಉಲ್ಲಾಸ್ (ಗು.ವಿ) – ಖುಷಿರ್ ಎಕ್‌ಭಾವ್. ಫಣೋ ಉಲ್ಲಾಸ್ ವೇಗೋ – **ಉಲ್ಲಾಸ್**

ಉಷ್ಣತಾ (ಕ್ರಿ) – ಜನ್ಮೇನ ಕಾವ್ ವೆರೊ ಕಾ ಕೋ ಉಷ್ಣತಾ ಸವಾಳೇರ ವೇನಿ, **ಉಷ್ಣತೆ.**

ಉಲ್ಲು (ನಾ.ಪ)–ಗುಗ್ಗು, ರಾತ್ ವಡೆವಾಳೊ, ಉಲ್ಲು ಬನಾಮತ್ – **ಗೂಬೆ. ಮೂರ್ಖ.**

ಊ

ಊ (ಸಂಬೊ)– ಏಕ್‌ಅದ್ಮೀನ ದಕಾಳೇರೊ.

ಊಜ್ಯಾ ಮಾರೊಜಕೊ – **ಅವನೇನ?**

ಊಕ (ಸಂ.ವಾ)–ಏಕ್ ಸಾವಜಾನ್ ದಕಾಳೆರೊ, ಊಕ ತು ದಕಾಳೋ ಜಕೊ – **ಅದೇನ.**

ಊಂಚೋ(ಕ್ರಿ)–ಹಾತ್ ಚೇಪೇನ್ ವೆನಿಜಕೊ. ಊಂಚೋ ಜೋ – **ಎತ್ತರ**

ಊಂಟ್ (ನಾ) – ರೇತಿಮಾ ದಾಸೇವಾಳ್ ಏಕಜನಾವರ್. ಊಂಟೇ ಪರ್ ಬೇಸ್ – **ಒಂಟೆ**

ಊಂಟನಿ (ಸ್ತ್ರೀ.ವಾ) – ಹೆಣ್ ಊಂಟ್. ಊಂಟನೀರ ದೂದ್ ಪೀ ಹೆಣ್ಣು – **ಒಂಟೆ.**

ಊಡಕಿ (ಕ್ರಿ)– ಧಾಸಣಿನ ಹಾತ್‌ಘಾಲ್ಲೇರೊ. ಓನ ಊಡಕಿ ಘಾಲ್ಲಿದೋ – **ಮದುವೆಯಾಗಿ ಮತ್ತೆ ಮದುವೆ ಆಗುವ ಹೆಂಗಸು.**

ಊ ದಾ (ಕ್ರಿ)– ದಕಾಳನ್, ನತೊ ನಾವಶ್‌ಕೇನ್ ಮಾಂಗೇರೊ. **ಊದಾಕರನ – ಅದನ್ನು ಕೊಡು**

ಊಂಡೊ (ಗ.ವಿ.) – ಘೆಹರಾ, ವಣಾನ್ ಮಾಂಯಿ. ಊಂಡೊ ಖಾಳಿಯಾ – **ಆಳ.**

ಊಂದರ (ನ)– ಘರೇಮ ಊಂದರ ವೇಗಚ – **ಇಲಿ**

ಊದಬತ್ತಿ (ನಾ) – ದೇವರ್ ಮುಂಡಾಗ್ ಲಗಾಡೆರೊ. ದೇವೇನ್ ಊದ್ ಬತ್ತಿ ಲಗಾಡ್, – **ಅಗರ್‌ಬತ್ತಿ.**

ಊನ್ (ನಾ)– ಗೊರ್ಲ್ಲಿರ ಜನ್ಮೇಪರ್ ಮಳಜಕೊ, ಊನ್ ವೇಚ್, ಉಣ್ಣೆ, **ತುಪ್ಪಳ**

ಊಪರ್ ಚಡೇರೋ (ಕ್ರಿ)– ಊಂಚೊ ಜಾಯೆರೊ, ಕಷ್ಟಕರನ್ ಊಪರ್ ಆಯೇರೊ, ಹದ್ಧಮೀರನ್ ಪಾಣೀ ಉಪರ್ ಚಡೇರೊ. ಊಪರ್ ಚಡೇರೋ ಮನ್ ಆಯೇನಿ – **ಮೇಲೆ ಹತ್ತುವುದು.**

ಊಬಡ್–ಖಾಬಡ್ (ಗು.ವಿ) – ಸಮತಟ್ ಚೇನಿಜಕೊ, ಖಾಡ್–ಖಡ್ಡಾ, ಹೇಟ–ಊಪರ್. ಜಮಿ ಊಬಡ್–ಖಾಬಡ್ ಛ ಅಸಮಾನತೆ, ಏರುಪೇರಾದ – **ತಗ್ಗು–ದಿನ್ನೆಯುಳ್ಳ.**

ಊ ಕೂಣ್ (ಪ್ರ.ವಾ)– ಪೂಚೇರೊ. ಊ ಕೂಣ್‌ಕರನ್ – **ಅವನ್ಯಾರು**

ಊ ಕತ್ (ಪ್ರ.ವಾ)– ಏಕ್ ಸೇಮಾನ್ ರ ಬಗ್ಗೆ ಪುಚೆರೊ. ಊ ಕತ್ ಲಾ – **ಅದೆಲ್ಲಿ**

ಊ ಕಾಂಯಿ (ಪ್ರ.ವಾ)– ಮಾಲುಮ್ ಛೆ ನಿಜನ ಪುಚೆರೊ. ಊ ಕಾಂಯಿ ಹಾವ್ – **ಅದೇನು**

ಊ ಕಾವ್ (ನಿಷೇಧಾರ್ಥಕ) – ಕಾವ್ ಕೇನ್ ಕೆರೊ. ಊ ಕಾವ್ ಮ ಪುಚೊಜಕೊ – **ಅದಲ್ಲ.**

ಊ ಕೇನ್ (ಪ್ರ.ವಾ)– ಕೇನ್ ಕರನ್ ಪುಚೆರೊ. ಊ ಕೇನ್ ಕಾಡೊಚಿ – **ಅದು ಯಾರಿಗೆ**

ಊ ಲಾ (ಸಂ.ವಾ) – ಊ ದ ಕೇನ್ ಪುಚೆರೊ. ಊ ಲಾ ತೊ– **ಅದ ಕೊಡು**

ಊದ್ (ನಾ)– ದೇವೇರ್ ಮುಂಡಾಗ್ ಬಾಳೇರೊ. ಹಬ್ಬಮಾ ಊದ್ ಘಾಲ್. – **ಲೋಭಾನ**

ಊಟೊ (ಕ್ರಿ)– ಹೇಟ್‌ಬೇಟ್‌ಜಕೊ ಊಟೇರೊ. ಉಪ್ಪರ್ ಊಟ್ – **ಎದ್ದೇಳು.**

ಎ

ಎ (ಸಂಬೋಧನೀಯ) – ಹಕಾರೇರ್. ಎ ಭೋರಿ – **ಕರೆ**

ಎಕ್ (ಸಂ.ವಾ)– ಗಣೇರೊ, ಗಣಜೆಮಾ ಸೆತ್ತಿ ಮದ್ಲ್ ಆವಜಕೊ. ಮಾರಾದಾಯಿ ಎಕ್ ಛಜಕೊ – **ಒಂದು**

ಎಕ್–ಎಕ್ (ದ್ವಿರುಕ್ತಿ) – ವಿಕ್ರಾರೆಜಕೊ ಏಕೇಕ್ ದಾಣ ವೀಣೆರೊ. ಎಕ್–ಎಕ್ ಖೋ – **ಒಂದೊಂದು**

ಎಕದಮ್ಮ್ (ಕ್ರಿ) – ಅಚಾನಕ್. ಎಕದಮ್ಮ್ ವಾಗ್ ಆಯೋ –**ಒಂದೇ ಬಾರಿಗೆ, ಒಮ್ಮೆಲೇ**

ಎಕ್‌ವಣಾ(ಕ್ರಿ)–ಎಕ್ಕಜ್ ವಳಾ, ಅನುಮಾನ್ ಲಗಾಡೆರೊ, ಎಕಾದ್ ಹಪ್ತಾ, ಕನ್ನಾಯಿ

ಕೊಯಿ. ಎಕ್‌ವಣಾ ಘರ್ ಆಜೋ – **ಒಂದು ಸಲ, ಒಮ್ಮೆ.**

ಎಕ್‌ಸಾಥ್ (ಕ್ರಿ) – ಭಳನ್, ಎಕ್ಕವಳಾ. ಎಕ್‌ಸಾಥ್ ರೋ. – **ಒಟ್ಟಿಗೆ.**

ಎಕ್‌ಟಕ್ (ಕ್ರಿ) – ಸಾಂಜ್ ನೀತೊ ಪರಚಾತಿ. ಎಕ್‌ಟಕ್ ಖೋ – **ಒಂದೇ ಸಲ**

ಎಕ್‌ವೇನ್ (ಕ್ರಿ) – ಭಳನ್. ಏಕ್‌ವೇನ್ ಚಾಲೋ – **ಒಗ್ಗಟ್ಟು – ಏಕತೆ – ಐಕ್ಯ.**

ಎಕಾದ್ (ಸಂ.ವಾ) – ಏಕ್‌ವಳಾ. ಎಕಾದ್ ದಾಡ್ ದಾರು ಪೀ – **ಒಂದು ಅಥವಾ ಎರಡು ಸ್ವಲ್ಪ ಮಾತ್ರ**

ಎಕ್ಲೊ (ಸಂ.ವಾ) – ಎಕ್ ಆದ್ಮೀನ್ ಗಣೇರೊ. ಎಕ್ಲೋಜ್ ಕಾಮ್‌ಕಿದೊ. – **ಒಬ್ಬನೆ.**

ಎಕ್ಡಿ (ಸಂ.ವಾ) – ಏಕ್‌ವಡಿ. ಏಕ್ ಸಾಮು. ಎಕ್ಡಿಮೇಲ್ – **ಒಂದು ಕಡೆ**

ಎಮ್(ಗು.ವಿ) – ಏಕೇರ್ ಮಾಂಯಿ. ಎಮ್ ದೂದ್ ಛ – **ಇದರಲ್ಲಿ**

ಎನ್ (ಸಂ.ವಾ) – ಏಕ್ ಅದ್ಮೀನ್. ಎನ್ ಅಚ್ಛೊವೆಗೊ – **ಒಬ್ಬನಿಗೆ**

ಎ ಲೊ (ಕ್ರಿ) – ಹಾತೆಮಾರ್ ದೆರೊ. ಎ ಲೊ ಓ ಮತ್ – **ಇವನ್ನು**

ಎನೂನ್ (ಬ.ವ), ಘಣ್‌ಭಜೇನ್ ದೇರೊ. ಎನೂನ್ ಲೊ – **ಇವುಗಳನ್ನು**

ಏ

ಏಡಿ, (ನಾ), ಟಾಂಗ್ ಟೇಕಜಕೊ. ಏಡಿ ಸುಕಾರಿಚ್ – **ಪಾದ.**

ಏಡಾ–ಬೇಡಾ (ದ್ವಿರುಕ್ತಿ)–ವಾಲವಾ ಭೇನಿಜಿಂವ್ ವಾತೆಕರೆರೊ. ಏಡಾ–ಬೇಡಾ ವಾತೇ ಮತ್ ಕರ್ – **ಅಸಂಬದ್ಧ.**

ಏಂಡೋ (ಪು.ವಾ) – ವೇಂಡೊ, ಮಾತೊಸಮ್ಮೊರ್ ಭೆನಿಜಕೊ. ಏಂಡೋ ಹಾವ್ – **ಹುಚ್ಚ, ತಿರುಕ.**

ಏಂಡಿ (ಸ್ತ್ರೀ.ವಾ) – ವೆಂಡಿ, ಮಾತೊಸಮ್ಮೊರ್ ಭೆನಿಜಕೊ ತಾಂಡ್ರಿ, ಬೀರ್. ಏಂಡೀ ಹಾವ್ – **ಹುಚ್ಚಿ**

ಏ ಪರ್ (ಗು.ವಿ.) – ಏ ಕೆ ಪರ್ ಅಪರಾಧ್ ಪಡಾಯೇರೊ. ಏ ಪರ್ ಭಾಟಲಾದ್ – **ಒಬ್ಬನ ಮೇಲೆ**

ಏಜ್ (ಸಂ.ವಾ)– ಏಜ್ ಕರನ್ ಗುರ್ತ್ ಪಕಡೇರ್. ಓ ಭೋರ್ ಏಜ್ ಹಾವ್– **ಇವರೇ**

ಏನೂನ್ (ಬ.ವ) – ಮೋಟ್ ಅದ್ಮೀನ್, ಘಗ್‌ಅದ್ಮೀನ್ ಕೇರೊ. ಏನೂನ್ ಕಾಂಯಿ ಮಾಲಂ ಛೇಯಿ. – **ಇವರಿಗೆ.**

ಏನೂವ್ (ಗು.ವಿ)– ಘಣ್ ಅದ್ಮೀನ್ ಸಂಬೋಧ್ ಕರೇರೊ. ಏನೂವ್ ಭುದ್ಧಿಛೆಯಿ. – **ಇವರಲ್ಲಿ**

ಏನೂರ್ (ಬ.ವ), ಮಸ್ತ ಅದ್ಮೀನ್ ಭೇಳನ್ ಕೇರ್. ಏನೂರ್ ಖೇತಾರಿ ಹಾವ್ – **ಇವರ**

ಏಸೇ (ಬ.ವ), ಒಣಾನ್ ಭಜೇನ್ ಕೆರೊ. ಏಸೇ ಬಳದ್ ಅನೂರಜ್ ಹಾವ್. – **ಇವೆಲ್ಲವೂ**

ಒ

ಒ (ಬ.ವ) – ಮಳಾವೊ, ಪಂಚಾಯಿತಿ. ಒ ಮಳಾವ್ ಭೇಟೇಚ – **ಅವರು**

ಒನ್ (ಸಂ.ವಾ) – ಏಕ್ ಅದ್ಮೀನ್ ಅವನಿಗೆ ದಕಾಳೆರೊ. ಒನ್ ಕಾಮ್ ಛೇಯಿ – **ಅವನಿಗೆ**

ಒರ್ (ಸಂ.ವಾ) – ಒರಜ್ ಛ ಕೇರೊ. ಈ ವೀಂಟಿ ಒರಜ್ ಹಾವ್ – **ಅವನದೇ**

ಒಮ್ (ಸಂ.ವಾ) – ಏಕೇರ್ ಮಾಯಿ. ಒಮ್ ಘಗೊ ಗರಬ್. – **ಅವನಲ್ಲಿ**

ಒಲ್ಡಿ (ನಾ)–ಪ್ಲಾಸ್ಟಿಕೇರ್, ಖಜೂರಿರ್, ಲೋಯೆರ್ ಒಲ್ಡಿ, ಗೋಬರ್ ಪಾಡೇನ್ ಬಳಸಜಕೊ. ಒಲ್ಡಿಮ ಸಾಮಾನ್ ಭರ್ – **ಹೆಡಿಗೆ, ಪುಟ್ಟಿ**

ಒಲ್ಡಾ (ನಾ)–ಖಜೂರಿತಿ ಗೂಂತ್ ಮೆಲಜಕೊ ಗೋಬರ್ ಪಾಡೇರ್. ಒಲ್ಡಾಮ್ ಗೋಬರ್ ಭರ್– **ದೊಡ್ಡ ಹೆಡಿಗೆ**

ಓ

ಓ(ಗಾ.ವಾ) – ಸಂಬಂಧ ಸೂಚಸೇರ್. ಓ ಹಮಾವಾಳ್ ಹಾವ್ – **ಅವರು**

ಓಡ್ನಿ (ನಾ) – ಕಿರ್ಗಿ, ದಾವಣಿ, ಟುಕ್ರಿ. ಓಡ್ನಿ ಥಾಕ್ಲ – **ಸ್ತ್ರೀಯರು ಹೊದೆಯುವ ಬಟ್ಟೆ, ಮೇಲು ಸೆರಗು**

ಓಡ್ಲ (ಕ್ರಿ) – ಮಾತೇಪರ್ ಥಾಂಕೇರೊ. ಖೋಳ್ ಓಡ್ಲ. – **ಹೊದ್ದುಕೊ**

ಓಡೋ (ನಾ) – ಬೆಂಸಿ, ಗಾವ್ಡಿರ ಆಂಚ್ಛೆ ರಜಕೊ. ಓಡೊ ಭರನ್ ದೂದ್ ಥ. – **ಕೆಚ್ಚಲು.**

ಓಡ್ಯಾ (ನಾ) – ಭಾಟಕೂಟೆವಾಳೊ, ಗೋಡಾಭಾಂದೆವಾಳೊ, ಓಡ್ಯಾ ಘರ್ ಭಾಂದಚ.– **ಕಲ್ಲು ಹೊಡೆಯುವವರು**

ಓತ್ (ಕ್ರಿ) – ವತ್ತ, ಕಾಂಯಿ ತಾರಿ ಸಾವಮಾನ್ ಮೆಳಜಕೊ ಜಾಗ್ ಒತಾಯೆರ್. ಓತ್ತ ಕಾಂಯಿ ಛೇನಿ ವತ್ತ ಆ. – **ಅಲ್ಲಿ**

ಓರ್ (ನಾ.ಪ) – ಮಾಯೇರ್‌ನ್ ಭೇಟಾರ್ ಆಂತರ್. ಓರ್ ಪಡ್ಗಿ. – **ಕರಳು ಬಳ್ಳಿ**

ಓಲನ (ಕ್ರಿ) – ಭೇಳ್, ಕೂಡ್ಸನ್, ಏಕ್‌ಜಾಗ್‌ಕರನ್, ಓಲನ ದ. – **ಕಲಿಸಿ**

ಓವಡಿ (ಕ್ರಿ) – ದುಸರ್ ಪಾಕ್ತಿ, ದಸ್ಸೇಕ್ ಫಣಮ್. ಓವಡಿ – **ಆ. ಕಡೆ, ಮಗ್ಗಲು**

ಓಸ (ನಾ) – ಪರಭಾತಿ ಪೋರ್ ಖಡೇಪರ್ ರಜಕೊ ಪಾಣೇರ್ ಬೂಂದ್. ಓಸ್ ಪಡರೋಚ – **ಮಂಜು, ಇಬ್ಬನಿ, ತಂಗಾಳಿ**

ಓಳೋ (ಗು.ವಿ) – ಸುದ್ದೊ ಛೆಯಿಜಕೊ, ಆಡೊತೆಡೊ, ಓಳೊವೆಗೊಚ – **ಬಾಗಿದ**

ಓಳ್ಕಾಣಿ (ಗು.ವಿ) – ಖೂನ್ ಛಜಕೊ. ಊತೊ ಮನ್ನಾ ಓಳ್ಕಾಣಿ ಛ – **ಪರಿಚಯ**

ಓಳಂಗ್ (ನಾ) – ಸತ್ತೀರ್ ಮುಂಡಾಗ್ ಬೊಲೇರ್. ಬೀರೆ ಓಳಂಗ್ ಬೋಲ್‌ರೀಚ್ – **ಪ್ರಾರ್ಥನೆ**

ಓಲಾರೊ (ಗು.ವಿ) – ಓಲಾ, ಕೊಳೆವ. ಊ ಸಾರಿ ಓಲಾರೊಚ್ – **ಕೊಳೆಯಾಗು**

ಓಜ್ರಿ (ನಾ)– ಸಳೋಯಿಮ್ ಬೆಳಜಕೊ. ಆಂತ್ರ್ ಓಜ್ರಿಸ – **ಕರಳು**

ಓಕ್ಳಿ (ನಾ) – ಕಾಳೊಪೀಳೊ, ಹೋಳಿಮಾ ಓಕ್ಳಿರಮ್. – **ಓಕಳಿ**

ಔ

ಔಲಾದ್ (ನಾ) – ವಲ್ಲಾದ್, ಹುಟ್ಟಿ ಮೇಲಜಕೊ ಬೆಟ್‌ಬೆಟಾ. ಅನೂರ್ ಔಲಾದ್ ಮೋಟ್ಟ್. – **ಸಂತಾನ, ಮಕ್ಕಳು ಮರಿ, ಸಂತತಿ**

ಔಡಾ (ಗು.ವಿ) – ಮೋಟೊ, ಏಕ್ ಚೀಜೇರ್ ಪ್ರಮಾಗ್, ಊಂಚಾಯಿ ದಕಾಳೆರೊ. ಔಡಾ ಕಾಂಯಿ. – **ಇಷ್ಟು ದೊಡ್ಡ**

ಔಡಾಭಲಾ (ಗು.ವಿ)– ಭಲ್ಲೋಸಿ, ಮೋಟೊ. ಔಡಾಭಲಾ ವೆತ್ತೊ. – **ಇಷ್ಟು ದೊಡ್ಡದಾ!**

ಔಷಧ (ನಾ), ಕಾಯ್ಲಿವಜನಾ ಪರಾಯೆರೊ ದವಾ. ಔಷಧ ಪೀಣೂ. – **ಮದ್ದು**

ಕ

ಕ (ಕ್ರಿ)–ಪೂಚೇರೊ, ವೀಂತಿಕರೇರೊ, ಆಜ್ಞಾಕರೇರೊ. ತಾರ್‌ನಾವ್ ಕ– **ಹೇಳು**

ಕಚ್ಚ್ (ಕ್ರಿ), ಸಾಂಬಳರೇಜೇನ್ ಕೇರೊ, ಬೊಲೆರೊ, ಕೇರೊ. ವೂ ಕಚ್ಚ್ – ಎಲ್ಲಿದೆಯೋ? – **ಹೇಳ್ತಾನ**

ಕಚ್ಚರೇ (ಪು.ವಾ) – ಛೋರಾನ, ಮರ್ಧ್‌ಮಾನನ ಪುಚೇರೊ. ಕಚ್ಚರೇ ಕೇನಿ – **ಎಲ್ಲಿದೆಯೋ?**

ಕಚ್ಚಯೇ (ಸ್ತ್ರೀ.ವಾ), ಛೋರೀನ್, ತಾಂಡ್ರೀನ್ ಪೂಚೇರೊ. ಕಚ್ಚಯೇ ಛೋರಿ.– **ಎಲ್ಲಿದೆಯೇ**

ಕಚರೋ (ನಾ), ವಾಳೇಮಾ ಆನ್ ಘರೇಮ್ ಪಡೋಜಕೊ. ಕಚರೋ ಪಾಡ್ – **ಕಸ ಕಡ್ಡಿ, ಕಚರಾ, ಪಾಚಿ**

ಕಚ್ಚಾಖೋರಿ (ಕ್ರೀ), ಲಡಾಯಿ ಕರೇವಾಳೊ, ಮೋಟ್ ಥಾಳೆವಾಳೊ. ಕಚ್ಚಾಖೋರಿ ಮತ್ ವ – **ಜಗಳಗಂಟ**

ಕರ್ಜ್ (ನಾ) – ಪಿಸಾಲೆಮೆಲೊಜಕೊ ಕರ್ಜ್ ವತಾರ್ – **ಸಾಲ, ಕಡ, ಋಣ, ಉದ್ರಿ**

ಕಟ್ರಾ (ನಾ) – ಕಟೇರಾ, ಮುಚ್ಚಾಳಿ ಮಾಳ್ಳಿ.

ಕಟ್ರಾ ಮಾಚಳೀ ಖೋ – **ಮೀಸಿಗಿಲ್ಚ ಮೀನು**

ಕಾಟ್ (ಕ್ರಿ)– ಕೊತ್ತಾತಿ ಕಾಟ್.ಲಕ್ಡಿ ಕಾಟ್ – **ಕಡಿ**

ಕಾಟೆವಾಳೊ (ನಾ) – ಲೋಯಿಪಿಯೇ ವಾಳೊ. ಘರೇವ್ ಕಾಟೇವಾಳ್ ಒಗಾನ್ ವೇಗೇಚ್ – **ತಿಗಣೆ**

ಕಾಟೋಟಿ (ನಾ), ಭಾಟಿಕರೇರ್. ಕಾಟೋಟಿಮಾ, ಆಟೋದಾಬ್.–**ಪರಾತ (ರೊಟ್ಟಿ ತಟ್ಟುವ ದೊಡ್ಡ ತಟ್ಟೆ)**

ಕಟ್ಟೋಮಟ್ಟೋ (ದ್ವಿರುಕ್ತಿ), ಒತ್ತೇರ್ ವತ್ತಜ್. ಖಾಣೊ ಕಟ್ಟೋಮಟ್ಟೋ ಮತ್ ಕರೋ– **ಅಲ್ಲಿಂದಲ್ಲಿಗೆ, ಕಡಿಮೆ**

ಕಾಟಿ (ನಾ)–ಸೇವಾಭಾಂಯರ್ ಗುಡಿಮುಂಡಾಗ್, ಮಟ್ಟೇಮುಂಡಾಗ್ ಭಾಂದಜಕೊ. ಭಾಂಯಾರ್ ಮಟ್ಟೇಮುಂಡಾಗ್ ಧೋಳ್ ಕಾಟಿ – **ನಿಶಾನೆ, ಬಾವುಟ**

ಕಠಿಣ(ಕ್ರಿ) – ಬಿರಸ್, ಘಟ್ಟೋ. ಕಠಿಣ ಕಾಮ್ ಕರೋ – **ಕಠಿಣ, ಬಿರುಸಾದ**

ಕಡ್ (ನಾ) – ಟಾಂಗೇರ್ ಊಪರ್ ಪೇಟೇರ್ ಹೇಟೇರ್ ಭಾಗ. ಕಡ್ ಮೋಡೊ – **ಸೊಂಟ**

ಕಡಕ್ (ಗು.ವಿ) – ಬಿರ್ಸ್, ಜೋರ್. ವೂ ಕಡಕ್ ಆದಮೀ ಹಾವ್ – **ಬಿರುಸು, ಗಟಿ**

ಕಡ್ಗ (ನಾ) – ಕಲ್ಡಾ, ತಾಂಡ್ರಿರ್ ಹಾತೆ ಮಾಯರ್. ಕಲ್ಡಾ ಘಾಲ್ – **ಕಾಲ್ಕಡಗ**

ಕಡತಿ (ನಾ) – ತಾಕತ್ತೇರ್ ಧಾಣಾ, ಘೋಡೇನ್, ಬಳದೂನ್ ಮೇಲಜಕೊ. ಘೋಡೆನ ಕಡತಿಘಾಲ್ – **ಹುರುಳಿ**

ಕಡಬಿ(ನಾ) – ಜಾರೇರ್ ದಾಂಡ, ಬಳದ್ ಖಾಯೇರ್. ಕಡಬಿರ ಭಾರೋ ಭಾಂದ್ – **ಜೋಳದ ದಂಟು**

ಕಣೇವ್ (ನಾ.ವಿ.)– ಗರ್ಬೇರ್ವ್, ದುರಹಾಂಕಾರಿ. ಭಾರೀ ಕಗೇಮ ವೂ – **ಸೊಕ್ಕು**

ಕತ್ (ಕ್ರಿ)– ಕುಣಸ್ ಜಾಗೇವ್. ಕತ್ ಆಂವ್ರೂ – **ಎಲ್ಲಿ ?**

ಕತ್ರಾ (ಸಂ.ವಾ) – ಆದ್ಮಿರಲೇಕೋ ಪೂಚೇರೋ. ಕತರಾ ಆದ್ಮಿವೆತ್ತೆ? – **ಎಷ್ಟು ?**

ಕತ್ರಾ (ನಾ)– ಘರೇವುಂಡಾಗ್ ಭೋಂಕೆವಾಳೊ. ಘರೇಮುಂಡಾಗ್ ಕತ್ರಾ ಬಗಳ್ ರೋಚ್ – **ನಾಯಿ**

ಕತ್ರಿ (ನಾ) – ಬಸೇವಾಳ್. ಕಾಳ್ ಕತ್ರಿ – **ಹೆಣ್ಣು ನಾಯಿ**

ಕತ್ ರಾ (ಕ್ರಿ)– ಕತ್ ಛೋ ಕೇನ್ ಪುಚೇರೊ. ಕತ್ ಛೀರಾ? – **ಎಲ್ಲಿದಿರಿ?**

ಕತ್ ಆಂವ್ರೂ (ಕ್ರಿ)– ಕುಣಸ್ ಜಾಗೇಪರ್ ಆಣು ಕೇನ್ ಪುಚೇರ್. ಕತ್ ಆಂವ್ರೂ ಕೋ – **ಎಲ್ಲಿ ಬರಲಿ.**

ಕ ತು (ಕ್ರಿ)– ತೀನ್ ಚಾರ್ ಜಾಣ ಏಕೇನ್ ಕ ಕೇರೊ. ಕರ ತು – **ಹೇಳು ನೀನು**

ಕತೇತಿ (ಕ್ರಿ)– ಕುಣಸ್ ಜಾಗೇತಿ ತೂ ಕತೇತಿ ಆಯೋ – **ಎಲ್ಲಿಂದ?**

ಕತೇತುಣಿ (ಕ್ರಿ)– ದೂರಿ ಮಾಪೇರೊ. ಕತ್ತೆತುಣಿ ತಾರ ಜಾಗ ಛ – **ಎಲ್ಲಿಯವರೆಗೆ**

ಕತೋ (ಕ್ರಿ)– ಏಕ್ ಆದ್ಮಿ ಕಾಂಯಿಕೇ ಗೊಕೇನ್ ಛ ಓನ್ ಪೂಚೇರೊ. ಕತೋ ಕಾಂಯಿ – **ಅಂದರೆ**

ಕತ್ತೆಣ್ಣೆ (ನಾ) – ಕಡಬಿ ಕತ್ರೇರ್, ಲಟ್ಟಾ ಕತ್ರೇರ್. ಕತ್ತೆಣ್ಣೆಲೇನ ಕತರ್– **ಕತ್ತರಿ**

ಕನ್ನಾ (ಕ್ರಿ)– ವೇಳೋ ಪುಚೇರ್. ತೂ ಕನ್ನಾ ಆಯೋ – **ಯಾವಾಗ**

ಕನ್ನಾ (ಕ್ರಿ)– ಘರ್‌ಘೋಡನ್ ಚೋರಿ ಕರೇರೊ. ಓರ್ ಘರೇನ್ ಕನ್ನಾ ಪಡಗೋಚ್ – **ಕನ್ನ ಹಾಕುವುದು**

ಕ್ಕನ್ನ (ಕ್ರಿ)– ಧೂರೀ ಮಾಪೇರ್. ಕ್ಕನ್ನ ಆ – **ಹತ್ತಿರ**

ಕನಪಡಿ (ನಾ) – ಕಾನೇರ್ ಹೇಟೇರ್. ಕನಪಡಿ ಪರ ಮಾರ್ ಮತ್ – **ಗಲ್ಲ, ಕಿವಿ ಮತ್ತು ಕಣ್ಣುಗಳ ನಡುವಿನ ಸ್ಥಳ.**

ಕನ್ನಾಕತೋ (ಕ್ರಿ)– ಕುಣುಸೊ ದಾಡ್, ಕುಣಸೊ ವಗತ್ ಕೇನ್ ಪೂಚೇರೊ. ಕನ್ನಾಕತೋ ಮನ್ ಮಲಾಮ್ ಛೇಯ

– **ಯಾವಾಗಂದ್ರೆ, ಒಮ್ಮೊಮ್ಮೆ**

ಕನಿಯಾ (ನಾ) – ಕಾನೇಮ್ ಫಾಲೇರ್. ಕನಿಯಾಫಾಲ್ – **ಕಿವಿಯಲ್ಲಿ**

ಕಪಾಳೊ (ನಾ) – ಆಂಕೀರ್ ಊಂಚೊ, ಲಟ್ಟಾರ್ ಹೇಟೇರ್ ಜಾಗ್. ಕಪಾಳೆ ಪರ್ ಟೀಕೋ ಲಗಾಡ್ – **ಹಗೆ**

ಕನ್ಯಾ (ನಾ) – ಕುಂವಾರ್ ಛೋರಿ, ಆಚ್ ಕನ್ಯಾಲಾಣು – **ವಧು**

ಕಪ್ಪಿ (ನಾ) – ಅಂಧಾರೇಮಾ ವಡೇವಾಳ್, ದಿಂಯೇ ಜಾಡೋಪರ್ ಲಟಕೆ ವಾಳ್ ಕಪ್ಪಿ ರಾತ್ ವಡಭ್ – **ಬಾವಲಿ**

ಕಪಟಿ (ಗು.ವಿ.)– ಖೋಟ್‌ಬುದ್ಧಿವಾಳೊ. ಕಪಟಿ ಮತ್ ವ – **ಮೋಸ, ಕಪಟ**

ಕಪಾಟ್ (ನಾ) – ಘರೇಮ್ ಸಾಮಾನ್ ಮೇಲೇರೊ. ಕಪಾಟೇಮ ವಾರ್ ಸೇಮಾನ್ ಮೇಲ್. **ಅಲ್ಮಾರ್**

ಕಪೂರ (ನಾ) – ದೇವರ್ ಮುಂಡಾಗ್ ಲಗಾಡೇರ್. ದೇವನ ಕಪೂರ ಲಗಾಡ – **ಕರ್ಪೂರ**

ಕಬೂತರ್(ನಾ) – ಧೊಳೊ ಪಾರಿವಾಳ. ಕಬೂತರ ವಡರೋ ಚ್ – **ಪಾರಿವಾಳ**

ಕಬಾ ಕಾಂಯಿ (ಬಹುವಚನ) – ಮೋಟುನ್ ವಾತೆ ಕರೇರೊ. ತೋಂಯ್ ಕಭಾ ಕಾಂಯಿ – **ಹೇಳಪ್ಪಾ**

ಕಮಲೇರ್ ಫೂಲ್ (ನಾ) – ಪಾಣಿಮಾ ರಜಕೊ ಫೂಲ್. ಕಮಲೇರ್ ಫೂಲ್ ಚಡಾ – **ಕಮಲದ ಹೂ ತಾವರೆ ಹೂ**

ಕಮಜೋರ್(ನಾ.ವಿ)–ಹಾತೇತಿ ವೇನಿಜಕೊ. ಕಮ್‌ಜೋರ್ ಮತ್ ವ – **ಬಲಹೀನ, ಅಶಕ್ತ, ದುರ್ಬಲ**

ಕಮರಾ (ನಾ) – ಖೋಲಿ, ವಸೇರ್. ಕಮರಾ ಕಚ್ಛ್ ಸ – **ಕೋಣೆ**

ಕಮ್‌ಕರ್ (ಕ್ರಿ) – ಓಣಾನ್ ರಜೇನ್ ಕಮ್‌ಕರೇರೊ. ದೇಕೇರೋ ಕಮ್‌ಕರೊ – **ಕಡಿಮೆ ಮಾಡು.**

ಕಮ್ (ಕ್ರಿ) – ಥಡಿ, ದಸ್ಸೇಕ್. ಕಮ್ ಖೋ– **ಕಡಿಮೆ ಬೆಲೆ**

ಕಮಾಯಿ (ಕ್ರಿ) – ಕಮಾವಣಿ, ಮೆಹನತೇರ್ ಫಲ್. ಕತ್ರಿ ಭರ ತಾರ್ ಕಮಾಯಿ – **ಗಳಿಕೆ**

ಕಾಣ್ (ಗು.ವಿ) – ನಾಸ್ ವೆಮಿಲಿಜಿಕೊ, ಕಾಮೇನ್‌ಅಯಿನಿಜಿಕೊ. ಕಾಣ್ ಬೀಜಾ – **ಹುಳುಕು ಬೀಜ**

ಕಣ್(ಕ್ರಿ) – ಸಪ್ನೇಮ್ ವಾತೆಕರೇರೊ, ನೀಂದೇಮ್ ವಾತೆಕರೇರೊ. ಊ ಕಣ್ರ್ರೋಚ್ – **ನಿದ್ರೆಯಲ್ಲಿ ಮಾತನಾಡುವುದು**

ಕಮಾವೊ (ಕ್ರಿ) – ದುಡಿಮಿ ಕರೇರೊ, ಹಾತ್ ಟಾಂಗ್ ಚಲಾಯೆರೊ. ಜಪ್ಪಾ ಕಮಾವೊ – **ದುಡಿದು ಸಂಪಾದಿಸು ಮಾತ**

ಕಮಾರ್(ನಾ) – ಹಾಂಡಿವಾಳೋ, ಹಾಂಡಿ ಕರೇವಾಳೊ. ಹಾಂಡಿವಾಳೊ ಕಮಾರ್– **ಕುಂಬಾರ**

ಕರ್ (ಕ್ರಿ) – ಕಾಮ್ ಕರ್. ಗಬ್‌ಬೇಸೆಜೇತಿ ಕಾಮ್ ಕರ್ – **ಮಾಡು**

ಕರಾಡಿ(ನಾ), ಲಕಡಿ ಚೀರೇರ್, ಲಕಡಿ ಕಾಟೇರ್. ಕರಾಡಿಲೇನ್ ಕಾಟ್ – **ಕೊಡಲಿ**

ಕರಾರ್ (ಕ್ರಿ)– ವಿಯಾರಾಂಗ್ ಒಪ್ಪಣಿದೇರೊ. ಕರಾರ ಕರ್ ಲೇಣು – **ಒಪ್ಪಂದ ಕರಾರು,**

ಕರಾಡೊ (ನಾ) – ದಂಡಿ, ನಂದಿರ, ಕರಾಡೋ – **ನದಿಯ ದಂಡೆ, ದಡ, ಧೈರ್ಯ**

ಕರಾಮತ್ (ಕ್ರಿ) – ಜಾದೂ. ಕರಾಮತ್ ದಕಾಳ್ – **ಅದ್ಭುತ, ಕೈಚಳಕ, ಚಮತ್ಕಾರ, ಕರಾಮತ್ತು**

ಕರೇಲಾ (ನಾ) – ಕಡೀರ್ಝೂರ್, ಕರೇಲಾ ಖಾಣು ಆಚೋ – **ಹಾಗಲಕಾಯಿ.**

ಕರೇಚಿ (ನಾ) – ನವತೊ ಕರೇಚಿ ಕಾಂಯಿ. ಕರೇಚಿ ಕಾಂಯಿ – **ಮಾಡುತಿಯಾ**

ಕಲಾ (ಗು.ವಿ.) – ಅಟ್ಮೇರ್ ಮಾಯಿ ರಜಕೊ. ತಾರ್‌ಡಾಂಯಿ ಆಛೊ ಕಲಾ ಛ– **ಕಲೆ, ಪ್ರತಿಭೆ**

ಕಲಾಕಾರ್ (ನಾ.ವಿ.) ಚಿತ್ರ ಲಕೇವಾಳೋ, ಗಾವಣಿಯಾ. ಓ ಮೋಟೋ ಕಲಾಕಾರ ಹಾವ್ – **ಕಲೆಗಾರ, ಕಲಾವಿದ**

ಕಲ್ಪನಾ (ಗು.ವಿ) – ಕಲ್ಪನಾಕರ್, ಶೋಚೇರೊ **ಕಲ್ಪನಾ ಕರ**

ಕಲ್ಯಾಣ್ (ಕ್ರಿ)– ಆಚ್ಜೋ ಕರೇರೊ ಕಲ್ಯಾಣ ಕರ್ – ಒಳ್ಳೆಯ, ಶುಭಕೊಡು

ಕಲ್ಡಿ (ಕ್ರಿ) – ಪಟ್ ವೇಗಿ – **ಕುಡಿಕೆ**

ಕಲ್ಡ್ (ಕ್ರಿ) –'ಬಿರ್ಸ್, ಚಾಬೇನ್ ವೆನಿಜಕೊ, ಕಲ್ಡ್ ಛ ಚಾಬೇನ್ ವೇನಿ – **ಗಟ್ಟಿ.**

ಕಲ್ಡಾ (ನಾ) – ಟಾಂಗೇ ವಾಯಿರ್. ಟಾಂಗೇಮ್ ಕಲ್ಡಾ ಘಾಲ್ – **ಕಾಲುಬಳೆ**

ಕವಳಿವಳಾ(ಗು.ವಿ)– ದಾಡೋ ಮಾಂಯಿ ಭಾರ್ ವೇರೊ. ಕವಳಿವಳಾ ಕೆವಡಿಜಾಚ್ಚಿ – **ಇಳಿ ಸಂಜೆ, ಮಕ್ಕರ ಗೌಳ.**

ಕಳಸ್ (ನಾ) – ದೇವೇ ಮುಂಡಾಗ್ ಮೇಲೆಜಕೊ. ದೇವೇನ್ ಕಳಸ್ ಚಡಾ– **ಕಲಶ, ಗೋಪುರದ ಮೇಲಿನ ಶಿಖರ**

ಕಳಜೋ (ನಾ) – ಪೇಟೇಮಾ ಲೋಯಿ ಶುದ್ಧ್ ಕರಜಕೊ. ಕಳಜೋ ಖೋ – **ಯಕೃತ್ತು**

ಕಸಾಯಿ (ಸಃ) – ಗೋರ್ಲಿ, ಛೇಳಿ, ಢೋರ್ ಕಾಟೇವಾಳೊ. ಕಸಾಯಿ ಮತ್ ಬಣ್– **ಕೆಟ್ಟವನು ನಿರ್ದಾಯಿ**

ಕಸರತ್ (ಕ್ರಿ) – ಸಾಮ್, ಜೀವ್‌ಬೆಳಸಾ, ಕಸರತ್ ಕರಣು – **ವ್ಯಾಯಾಮ, ಕಸರತ್ತು, ಹೆಚ್ಚಳ.**

ಕಸಾಯಿಖಾನಿ (ನಾ) – ಢೋರ್ ಗೋರ್ಲಿ ಕಾಟಜಕೊ ಜಾಗ್. ಬಳದ ಕಸಾಯಿ ಖಾನಿ ನ ಜಾವಚ – **ಪಶುವಧಶಾಲೆ, ಕಸಾಯಿಖಾನೆ**

ಕಸ್ತೂರಿ (ನಾ)– ವಾಸನಿ ವಾಳ್, ಕಸ್ತೂರಿ ಮೃಗತಿ ಮಳಜಕೊ. ಕಸ್ತೂರಿ ವಾಸನಿ ಮಾರಾಚ್ – **ಕಸ್ತೂರಿ**

ಕಸ್ಸೆ (ನಾ) – ವಿಯಾ–ನಾತ್ರಮಾ ಬಾಂದೇರ್. ಕಸ್ಸೆ ಬಾಂದ್ – **ದಾರದಿಂದ ಹೊಲಿದ ಕಾಲಿಗೆ ಸುತ್ತುವ ಬಟ್ಟೆ**

ಕಸ್ಸೇನ್ (ಪ್ರ.ವಾ) – ಕಸ್ಸೇನ್ ಕರನ್ ಕಾರಣ ಪೂಚೇರ್. ಕಸ್ಸೇನ್‌ಕೇನ್ – **ಏತಕ್ಕೆ**

ಕಸ್ಸೇಕ್(ಪ್ರ.ವಾ) – ಮಾಲೂಮ್‌ಛೇನಿಜೇನ್ ರಾತಡ್, ಪೀಳ್ ಕಸ್ಸೇಕ್ ವೆತ್ತಿಕೇನ್ ಪೂಚೇರ್. ಕಸ್ಸೇಕ್ ವೆತ್ತಿಕೇನ್ – **ಎಂಥದ್ದು**

ಕಸೋಟ್ಯಾ (ನಾ) – ಪೇಟಿಯಾರ್ ಢುಂಗೇಕನ್ ಹಳಜವೆಲಜಕೊ. ಕಸೋಟ್ಯಾ ಹಳಜಾವೇಲಚ.– **ಬಂಜಾರಾ ಮಹಿಳೆಯರು, ಘೇಟಿಯಾ (ಘಾಘ್ರಾ) ದ ಮೇಲೆ ನಡಕ್ಕೆ ಜೋತು ಬಿಟ್ಟಿರುವ ಅಲಂಕಾರಿಕ ಸಾಧನ.**

ಕಷ್ಟ (ಗು.ವಿ) – ತರಾಸ್, ತೊಂದ್ರಿ, ಗರೀಬ್ ಧಾಯಿ ತರಾಸ್ ಮತ್ ಘಾಲ್– **ತೊಂದರೆ, ಕಷ್ಟ.**

ಕಷ್ಟದೇರೊ (ಕ್ರಿ) – ಕಾಂಯಿಂಜ್ ಛೇನಿಜೇನ್ ಅಜೀ ಪೀಡಾದೇರೊ. ಕಷ್ಟ ಮತ್‌ದ – **ಪೀಡಿಸುವುದು, ಬಾಧಿಸುವುದು, ಕಷ್ಟ ಕೊಡುವುದು**

ಕ್ಷಮಾ (ಕ್ರಿ) – ಮಾಪ್‌ಕರ್, ಕ್ಷಮಾಕರನು– **ಕ್ಷಮೆ**

ಕ್ಷಮಾಕರ್(ಕ್ರಿ) – ಏ ಕೇರ್ ಕರ್ಣಿನ ಮಾಫ್‌ಕರೇರೊ, ಕ್ಷಮಾಕರನ್ ಮೊಟೋ ವ – **ಕ್ಷಮಿಸು**

ಕಾ

ಕಾ (ಪ್ರ.ವಾ) – ಕಸೇನ್‌ಕೇನ್ ಪೂಚೇರೊ. ಕಾ ಕೋ – **ಯಾಕೆ?**

ಕಾಕಡಿ (ನಾ) – ವೆಲ್ಡಿಪರ್ ಲಾಗೇರ್ ಖಾಯೇನ್ ಆವಜಕೊ ಕಾಕಡೀರ ಲಗಾವಣ್ – **ಸೌತೆಕಾಯಿ**

ಕಾಂಕರಾ (ನಾ) – ಭಾಟತೀನಾನ್‌ಕ್ಯಾ, ಟಾಂಗೇವಮ್ ಚಬೇರೊ. ಕಾಂಕರಾ ಝುಲೇರ್ ಛಾಣ್ಣಿ – ರತ್ನ, ಜಲ್ಲ್ – **ಹರಳು**

ಕಾ ಕತ್ತೊ (ಕ್ರಿ)– ಕೋಯಿಕಜೇನ್ ಕಾರಣ್ ಪುಚೇರೊ, ಪ್ರಶ್ನಿಕರೇರೊ. ಕಾ ಕತೋ ಮಾಲಮ್ ವಿಕೋನಿ – **ಯಾಕೆಂದರೆ**

ಕಾ ಕಾ (ನಾ) – ಬಾಪೇರ್ ಭಾಯಿ ವೂ ಮಾರ್ ಕಾಕಾ ಹಾವ್ – **ತಂದೆಯ ತಮ್ಮ ಚಿಕ್ಕಪ್ಪ**

ಕಾ ಕಿ(ನಾ)– ಬಾಪೇರ್ ನಾನ್‌ಕ್ಯಾ ಭಾಯಿರ್ ಬೋಡಿ, ವೂ ಮಾರ್ ಕಾಕಿ ಹಾವ್– **ತಮ್ಮನ ಹೆಂಡತಿ ಚಿಕ್ಕಮ್ಮ**

ಕಾಗಲಾ (ನಾ) – ಕಾಳೊ, ಕಾ ಕಾ ಕರೇವಾಳ್ ಪಕ್ಷಿ. ಕಾಗಲಾ ಅಲ್ಡಾರೋಚ – **ಕಾಗೆ**

ಕಾಗಲಿ (ನಾ) – ಕಾಳ್ ಹೆಣ್ ಪಕ್ಷಿ. ಕಾಗಲಿ ಅಲ್ಡಾರೀಚಿ – **ಹೆಣ್ಣು ಕಾಗೆ**

ಕಾಗಜ್ (ನಾ) – ಲಕ್ಕೇನ್ ಬಳಸೇರೊ. ಕಾಗದೇ ಪರ್ ಲಕ್– **ಕಾಗದ**

ಕಾ ಗಿ?(ಸ್ತ್ರೀ.ವಾ)–ತಾಂಡ್ರಿಮಾಲಂ ಛೇನಿಜೆಂವ್ ಡಗ್ರಗಿತೊ ಪುಚೆರೊ. ಕಾಗಿ ವೂ – **ಯಾಕೆ ಹೋದಳು**

ಕಾ ಗೋ? (ಕ್ರಿ) – ತಾಂಡ್ರೊ, ಜಾವಜೇನ್ ಪುಚೇರೊ. ಕಾಗೋ ವೂ – **ಯಾಕೆ ಹೋದ**

ಕಾಂಗಣ್ಯ (ನಾ)–ಪಾನೇತಿ ವಿಂಟುವವ್ ಬಾಂದೇರೊ. ಕಾಂಗಣ್ಯ ಹಾತೇಮ ಘಾಲ – **ಕಂಕಣ, ಗಾಜಿನ ಬಳೆ**

ಕಾಗಂಸಿ (ನಾ) – ಕಾಂಗ್ಸಿ, ಮಾತುವಾಯರ್. ಕಾಂಗ್ಸ್ ತೀ ವಾ – **ಬಾಚಣಿಕೆ**

ಕಾಚ್ (ನಾ) – ಗಾಜೇರ್ ತುಂಡ್ ಫೇಟಿಯಾ ಅಥವಾ ಕಾಂಚಳಿ ಪರ್ ಸಿಡೇರ್. ಕಾಚೆ ತೂನ್ – **ಗಾಜು**

ಕ್ಯಾಚ್ಚೊ (ಗು.ವಿ.) – ನ ಪಾಕಜಕೊ, ಕ್ಯಾಚ್ಚೋ ಆಂಬಾ ಮತ್ ಖೋ – **ಹಣ್ಣಾಗದ, ಬೇಯಿಸದ ಕಚ್ಚಾ, ಕಾಯಿ, ಅಪಕ್ವ, ನಿಸ್ಸರ, ಅನುಭವವಿಲ್ಲದ.**

ಕಾಚಳಿ (ನಾ) – ತಾಂಡ್ರಿ ಪೆರಜಕೊ, ಸಾಪೇರ್ ಪರಿ. ಸಾಪೇರ ಕಾಚಳಿ – **ಹಾವಿನ ಪೊರೆ**

ಕಾಂಚಳಿ (ನಾ) – ರಂಗ್ ರಂಗೇರ್ ಕಾಂಚಳಿ – **ಕುಪ್ಪಸ**

ಕಾಚಮೊ (ನಾ) – ಕಾಚಮೋ, ಕಾಚ ಬೋ, ಕೀಂಚೇವವ್ ರೇವಾಳೊ.ಕಾಚವೋ ಪಾಣಿಮ ರಚ್ಚ – **ಆಮೆ**

ಕಾಚೇರ ಸೆಮಾನ್ (ನಾ) – ಗಾಜೇರ್ ಸಾಮಾನ್. ಕಾಚೇರ ಸೇಮಾನ್ ಪೆಟ್ಟಿಯ ಪರ್ ಛ – **ಗಾಜಿನ ಸಾಮನು**

ಕಾಜಲ್ (ನಾ) – ಆಂಕೀನ್ ಲಗಾಡೇರ್ ಕೂಡಿ ಕಾಜಲ್ ಲಗಾಡ ಮೋಲಿ – **ಕಾಡಿಗೆ, ಅಂಜನ**

ಕಾ ಜಾಂಚ್ ಲಾಗೊ (ಕ್ರಿ)– ಕಸೇನ್ ಜಾರೋಚಿ. ತು ಕಾ ಕಾಜಾಯ್ ಲಾಗೊ – **ಯಾಕೆ ಹೋಗುತ್ತೀಯಾ**

ಕಾ ಜಾವಚ (ಪ್ರ.ವಾ) – ವೂ ಕಾ ಜಾವಚ್‌ಕೇನ್ ಪುಚೇರೊ. ವೋ ಕಾ ಜಾವಚ್ಚ್. – **ಯಾಕೆ ಹೋಗುತ್ತಾರೆ**

ಕಾ ಜಾವಣು (ಪ್ರ.ವಾ) – ಕಾರಣ ಪುಚೇರೊ. ತು ಕಾ ಜಾವಣು – **ಯಾಕೆ ಹೋಗಬೇಕು. ಸಸಸ**

ಕಾಜು (ನಾ) – ಝಾಡೇಪರ್ ಲಾಗಜಕೊ ಫಳೇರ್ ಹೇಟ್ ರಜಕೊ ಬೀಜ. ಕಾಜು ಖಾ ಲ – **ಗೊಡಂಬಿ, ಗೇರು ಬೀಜ**

ಕಾಟ್ (ಕ್ರಿ)– ದಾಂತೇತಿ, ಕರಾಡಿತಿ, ಕೊತ್ತತ್ತಿ ಕಾಟೇರ್. ಮಾತೋ ಕಾಟ್ರೋ – **ಕಡಿ, ಕಚ್ಚುವುದು**

ಕಾಂಟಾ (ನಾ) – ಚೇಪ್ಲ ನರಜಕೊ ಟಾಂಗೇಮ್ ಬಂಜೇವಾಳೊ. ಕಾಂಟಾ ಭಂಜೋ – **ಮುಳ್ಳು**

ಕಾಂಕ್ರಿ (ನಾ) – ಭಾಟಾ ಫೂಟನ್ ತುಂಡ್ ವಜಕೊ. – ಕಾಂಕ್ರಿ – ಭಂಜಚ ದೂರ್ ಪ್ಪೇಕ್ – **ಕಲ್ಲಿನ ಚೂರು**

ಕಾಡ್ (ಕ್ರಿ) – ಖೋಲ್, ವಗಾಡ್. ಬಾಕ್ಲೋ ಕಾಡ್ – **ತೆರೆ**

ಕಾಡು ಕ (ಕ್ರಿ) – ಖೋಲೇರ್ ಆಂಗ್ ಪುಚೇರೊ. ಕಿಡಕಿ ಕಾಡು ಕ – **ತೆಗೆಯಲಾ?**

ಕಾಡೇಸ್ನಿಕ (ಪ್ರ.ವಾ) – ಖೋಲಚಿಕ್ ಕಾಂಯಿಕೇನ್ ಪುಚೇರೊ. ಬಾಗಲೊ ಕಾಡೇಸನಿಕ – **ತೆಗೆಯಲ್ವೇ?**

ಕಾಡಿ (ನಾ) – ದೀವೊ ಲಗಾಡೇನ್ ಕೇರಜಕೊ. ಕಾಡಿ ಲಾ ತೊ – **ಬೆಂಕಿ ಕಡ್ಡಿ**

ಕಾ ಡೇಚಿ (ಕ್ರಿ)– ಅನುಮಾನೇತಿ ಪುಚೇರೊ. ಬಾಗಿಲ ಕಾಡೇ ಚಿ – **ತಗಿತೀಯಾ?**

ಕಾಣಿ (ಗು.ವಿ) – ಆಂಕಿ ದಕಾಯೇನಿಜಕೊ ಛೋರಿ. ಊ ಕಾಣಿ ಛೋರಿ ಹಾವ್ – **ಕಣ್ಣಿಲ್ಲದವಳು**

ಕಾಣೊ (ಗು.ವಿ.) – ಆಂಕಿದಕಾಯೇನಿಜಕೊ ಛೋರ. ಕಾಣೋ ಹಾವ್ – **ಕುರುಡ, ಕಣ್ಣಿಲ್ಲದವನು**

ಕಾತಿ (ನಾ) – ದೋರಾ, ದೋರಾರ್ ತಾರ್. ಕಾತಿ ದೋರಾತಿ ಸಿಡ್ – **ನುಲು ತೆಗೆ ನೂಲು**

ಕಾತೋ (ನಾ) – ಪಾನ್ ಸಪಾರೀವವ್

ಖಾಯೇರೊ. ಕಾತೊ ಖೋ – **ಕಾಚೂ**

ಕಾ ದು (ಪ್ರವಾ) – ದೇರ್ ವಳಾ ಕಾಕೇನ್ ಪುಚೇರೊ. ಕಾದು ಪೀ ಸಾ – **ಯಾಕೆ ಕೊಡಬೇಕು**

ಕಾಂದಾ (ನಾ) – ಚುಲೋ ಕರಜನ್ನ ಅಡಿಗೀಮ್ ಬಳಸೀರೊ. ಕಾಂದಾತೀ ಬಾಟಿ ಖೋ – **ಈರುಳ್ಳಿ**

ಕಾಂದೋ (ನಾ) – ಮರಜ ಜನ್ನಾ ಕಾಂದೊ ದೇರೊ. ಖಾಟೇನ್ ಕಾಂದೋ ದ – **ಹೆಗಲು**

ಕಾನ್ (ನಾ) – ಸಾಂಬಳೇನ್ ಛ ಜಕೊ. ಕಾನೇತಿ ಸಾಂಬಳ್ – **ಕಿವಿ**

ಕಾನ್‌ಖೋದನಿ (ನಾ)– ಚಪ್ಪಿ, ಕಾನೆಮಾಯಿರ್ ಮೇಲ್ ಕಾಡೇರೊ. ಕಾನ್ ಬೋದನಿತಿ ಮಳಾಯಿಕಾಡ್– **ಕಿವಿಸ್ವಚ್ಛಗೊಳಿಸಲು ಬಳಸುವಂಥ ವಸ್ತು**

ಕಾನೆಮಾಯಿರ್ (ನಾ) – ಪೂಲಿ, ಮರ್ಕಿ, ವಿಯಾವಮ್ ಘಾಲೇರ್. ಕಾನೇವ್ ಮರ್ಕಿ ಘಾಲ್ – **ಕಿವಿಯಾಗಿನ ಬಂಗಾರ ಬೆಂಡೋಲೆ**

ಕಾಬರೋ (ಗು.ವಿ) – ಏಕ್ ನಮೂನಿರ್ ಬಣ್ಣ. ಕಾಬರೋ ರಂಗೇರ್ – **ಕಂದು**

ಕಾಬು (ಕ್ರಿ) – ಹತೋಟಿಮ್ ಕರ್, ಎಚ್ಚರ ಮಾರೇರೊ. ತಾರ ಕಾಬುಮ್ ರ – **ವಶ ಹತೋಟಿ**

ಕಾ ಬಾ? (ಪ್ರವಾ) – ಪ್ರಶ್ನಿ ಕರೇರೊ. ಕಾ ಬಾ ಹೈಂ ಕರ್ರೊಚಿ – **ಯಾಕಪ್ಪ?**

ಕಾಮ್ (ಕ್ರಿ) – ಬೇಸಜೇರ್ ವೇಸೇರ್ ಹಾತ್ ಹಲಾಯರೊ. ಕಾಮ್ ಕರ್ – **ಕೆಲಸ, ಬಯಕೆ, ಇಚ್ಛೆ, ಉದ್ದೇಶ.**

ಕಮರಾ (ನಾ) – ಖೋಲಿ. ಊ ಮಾರ್ ಕಮರಾ ಹಾವ್ – **ಕೋಗೆ**

ಕಾಮಕರೇರ ವೇಳಾ (ಕ್ರಿ)– ನಕಾಮ್. ಈ ಕಾಮಕರೇರ ವೇಳಾ ಹಾವ್ – **ಕೆಲಸದ ಅವಧಿ ಕೆಲಸ ಮಾಡುವ ಸಮಯ**

ಕಾಮ್–ಕಾಜ್(ದ್ವಿರುಕ್ತಿ) – ಕಾಂಯಿತೊಯಿ ಕರೇರೊ. ಕಾವ್–ಕಾಜ್–ಛೇನಿಕ ಕಾಂಯಿ ತೋನ್ – **ಉದ್ಯೋಗ, ಕೆಲ್ಸ** ಬಗ್ಸಿ

ಕಾಮಚೋರ್ (ಗು.ವಿ) – ಕಾಂಯಿಜ್ ಕರೇನಿಜಿಂವ್ ಜೀವ್ ಬೆಳೆಸೆವಾಳೊ. ಕಾಮಚೋರ್ ಮತ್ ಬನೋ – **ಸೋಮಾರಿ ಮೈಗಳ್ಳ**

ಕಾಮಣೆ (ನಾ) – ಪಿಳ್ಂಯಾರೀ, ಪಿಳೊದಕಾಯರೊ. ಕಾಮಣಿ ವೇಗಿಚ್ – **ಹಳದಿ ರೋಗ, ಕಾಮಾಲೆ ರೋಗ**

ಕಾಮಿ (ನಾ) – ತಾಂಡ್ರೇರ್ ಖಯಾಲೆವಾಳೊ.

ಕಾಮಿ ಸ್ವಾಮಿ – **ಕಾಮುಕ, ವಿಷಯ ಲಂಪಟ**

ಕಾಂಯಿ ? (ಪ್ರವಾ) – ಸಾಂಬೈನೀ ಜನ್ನಾ ಪರನ್ ಪುಚೇರೊ. ಕಾಂಯಿಕ ? **ಏನು?**

ಕಾಯಾ (ನಾ) – ಆದ್ಮೀರ್ ದೇಹ. ಈ ಕಾಯಾ ಜಾಯೇವಾಳೊ – **ದೇಹ, ಕಾಯ**

ಕಾಯದೋ (ನಾ) ಕಾನೂನು, ರೀತಿ ರಿವಾಜ್. ಕಾಯಿದೇರ್ ಪ್ರಕಾರ್ ಜಾಗೊ – **ನಿಯಮ, ಕಾಯಿದೆ**

ಕಾ ರೇ? (ಪ್ರವಾ)– ಕಸೇನ್. ಕಾ ರ ಹರಾಮ ಛಿ. – **ಯಾಕೋ**

ಕಾರಣ್ (ಕ್ರಿ) – ವಜೇ ಕಾಯ ಕಾರಣ ತೇಮ್ ಅತ್ ಆಯೇನ – **ಕಾರಣ, ಉದ್ದೇಶ**

ಕಾರಬಾರ್ (ಕ್ರಿ) – ಪಿಸಾಟಕ್ಕಾ ದೇಕ್ಲೇರೊ. ಕಾರಭಾರ ಚಲಾ – **ವ್ಯವಹಾರ**

ಕಾರಭಾರಿ (ನಾ) – ತಾಂಡೇಮಾ ನಾಯಕೇತಿ ಹೇಟೇರೊ. ಊ ಕಾರ್ ಭಾರಿ, ಹಾವಾ– **ಕಾರಭಾರಿ, ಹಿರಕ**

ಕಾರಿಕಾಡೇರೋ (ಕ್ರಿ) – ವಾಳೇರ್ ಸಕಾ ವೆಮೆಲಜೆನ್ ವಾರೇರೊ. ಕಾರಿಕಾಡೇತೊ ಆಚೋ ವಚ್ – **ನಿವಾಳಿಸುವುದು**

ಕಾ ರೋಯೆಚಿ (ಕ್ರಿ) – ರೋವಜೇನ್ ಪುಚೇರೊ. ಕಾ ರೋಯೆ ಚಿ ಕತೋ– **ಯಾಕೆ ಅಳತೀಯ**

ಕಾಲ್(ಭೂ.ಕಾ.)–ವೇಗಿಜಕೊ, ಡಗರ ಗೊಜಕೊ ದಾಡೊ. ಕಾಲ್ ಮಂಗಳ್‌ವಾರ ವೇತೋ – **ನಿನ್ನೆ**

ಕಾಲ್ (ಗು.ವಿ) – ವೇಳೊ. ಕಾಲ್

ಗಮಾಮತ್ – **ಸಮಯ, ಯುಗ, ಕಾಲ, ಸಮಯ, ಮರಣ**

ಕಾಲರಾ (ರೋಗ) – ರೋಗ್ ಕಾಲರಾ ಪೇಲರೊ. – **ಕಾಲರಾ ರೋಗ**

ಕಾಲ್ಪನಿಕ (ಗು.ವಿ) – ಊಹೆ ಕರನ್ ಸೃಷ್ಟಿಕರಮೇಲೆಜಕೊ, ಸೆಜ್ಜಿ ಕಾಲ್ಪನಿಕ್ ಛ – **ಕಾಲ್ಪನಿಕತೆ**

ಕಾಳೊ (ಬಣ್ಣ) – ಕಾಳ್, ಕಾಳೋ. ಬಣ್ಣ ವತಾಯರೊ, ಕಾಳೋ ಭೋರಾ– **ಕಪ್ಪು**

ಕಾಳ್ (ರೂಪ), ಭೋರಿರ್ ರೂಪ್ ದಕಾಳೇರೊ, ಕಾಳ್‌ಭಭೋರಿ – **ಕಪ್ಪು ಹುಡುಗಿ**

ಕಾಳಿಮರ್ಚೇ (ನಾ) – ಚರ್ಕೆಸಾರೋ ಮಸಲೇಮ್ ಘಾಲೇರ್, ಕಾಳಿಮರ್ಚ್ಚೇ ಮಸಾಲೆಮ್ ಘಾಲ್ – **ಕರಿ ಮೆಣಸು, ಒಣ ಮೆಣಸು**

ಕಾಳೋ (ನಾ) – ಫೇಟಿಯಾಪರ್ ಸಿಡೇರೊ. ಕಾಳೋಫೆರೊ – **ಬಂಜಾರಾ ಸ್ತ್ರೀಯರು ತೊಡುವ ಲಂಗದಲ್ಲಿ ಬಳಸುವ ನುಲಿನ ಫೇರಗಳು.**

ಕಾವ್ (ಕ್ರಿ)– ಕಾವ್ ಕರನ್ ನಿರೂಪ್ಸೇರೊ, ವೂ ಮಾ ಕಾವ್ – **ಅಲ್ಲಾ**

ಕಾವ್ (ಗು.ವಿ.) – ಉನ್ಯಾ, ಶಕೀ, ಬಳೇರೊ. ಕಾವ್ ಘಣೋ, ಲಾಗ್ರೋ – **ಶಕೆ, ದಗ**

ಕಾಡೊ (ನಾ), ಜಣಮೆಲಿಜೇನ್ ಘಾಲೇರೊ. ಕಾಡೋ ಪಿ. – **ಕಾಡ (ಜಕಾಯಿ ಹಾಕಿ ಬೆಲ್ಲವನ್ನು ಕುದಿಸಿ ಮಾಡಿದ ಪಾಕ)**

ಕಿ

ಕಿಂವ್ (ಕ್ರಿ)– ಕಸೇನಾ, ಕಿಂವ್ ಕತೋ – **ಯಾಕೆ?**

ಕಿಂಚ್ (ನಾ) – ಕಿಂಚಲ್ಡೊ, ಪಾಣೇರ್ ಹೇಟ್ ರೇರೊ, ಕಿಂಚೆಮ್ ಮತ್ ಪಡ್ – **ಕೆಸರು, ಕೊಳಚೆ**

ಕೀಚೂ (ಕ್ರಿ) – ತಾಂಡ್ರಿ ಕೀಕೇನ್ ಕೇರೊ. ಓನ್ ಕೀಚೂ ದೇಕ್. – **ಹೇಳಿದೆ**

ಕೀಡ (ನಾ) – ನಾನ್ ಕ್ಯಾ ಸೊ ಜೀವ್. ಕೀಡಾನ್ ಮಾರ್ – **ಹುಳ**

ಕೀಡಿ (ನಾ) – ಘರೇಮ್ ಸಕ್ರೇರ್ ಡಬ್ಬಾಮ ವಜಕೊ, ಕೀಡಿ ನಾನ್‌ಕೀಸ್ ಹಾವ್– **ಇರುವೆ**

ಕಿ ತೋ (ಕ್ರಿ) – ತಾಂಡ್ರಿ ಕೀಂಚು ಕೆರೊ. ಪರ್ ಭಾತಿ ಕಿ ತೋ – **ಹೀಳಿದ್ದೇನೆ ಎಂದು ಹೆಣ್ಣುಮಗಳು ಹೇಳುವುದು.**

ಕೀದೇ (ಕ್ರಿ) – ಮೊಟ್ ಅದ್ಮೀನ್ ಪುಚೇರ್. ತಮ್ ಘರ್ ಕೀದೇ – **ಮಾಡಿದೆವು, ಮಾಡಿದರಾ**

ಕಿದೋ (ಕ್ರಿ) – ಕರ್ಮೆಲೋಜೇನ್ ಒಪ್ಪೇರೊ. ಮಾ ವೂ ಕಾಮ್ ಕಿದೋ – **ಮಾಡಿದ. ಮಾಡಿದೆ.**

ಕೀಮ್(ಕ್ರಿ) – ಕೇವ್ಡಿ ಜಾರೇಚೊ ಕೇನ್ ಪುಚೇರ್, ಕೀಮ್ ಚಾಲೆ. – **ಎಲ್ಲಿಗೆ**

ಕಿಸ್ (ಕ್ರಿ) – ಕೇನಿ ಕೇನಾಕಿಸ್. ಕೇನಿ ಕಿಸ್ ಪಚ್‌ತು – **ಹೇಳಿಯಾ**

ಕೀಸ್(ನಾ) – ಗಾವಡಿ ವಿಯಾವಜನ್ನಾರ ಮದ್ಲೇರ್ ದೂದ್. ಕೀಸೇರ್ ದೂದ್ ಸೇನಿದ. – **ಗಿಣ್ಣದ ಹಾಲು**

ಕು

ಕುಕಡಿ (ನಾ) – ಘರೇಮ್ ಘಾಳಜಕೊ ಪಕ್ಷಿ. ಕುಕಡಿರ ಇಂಡ – **ಕೋಳಿ**

ಕುಕಡೋ (ನಾ) – ಮಾತೇಪರ್ ರಾತಡ್ ಝುಂಡೀ ರಜಕೊ. ಕುಕಡೊ ದಾಡಿ ಬೋಲ – **ಹುಂಜ**

ಕೂಂಡಿ (ನಾ) – ಗೋರೂರ್ ಕಾವ್‌ಜಕೊ ಕುಂವಾರ್. ವೂ ಕೂಂಡಿಹಾವ್ – **ಹುಡುಗಿ**

ಕುಂಕು (ನಾ) – ಕುಕು, ರಾತಡೊ, ತಾಂಡ್ರಿ ಭೋಟೀಮ್ ಲಗಾಡಜಕೊ. ಕು ಕು ಲಗಾಡ್. – **ಕುಂಕುಮ, ಸಿಂಧೂರ**

ಕುಂಗೋ (ಕ್ರಿ) – ಕಿಂವ್‌ಗೊ ಕೇನ್ ಪುಚೇರೊ. ಕುಂಗೊ ವೂ – **ಹೇಗೆ ಹೋದಾ**

ಕುಂಗೇ (ಕ್ರಿ) – ಮೋಟ್ ಅದ್ಮಿ ಜಾವ ಜೇನ್ ಪುಚೇರೊ, ಘಗ್ ಆದ್ಮಿ ಗೇ ಜೇನ್ ಕೇರೊ. ವೋ ಕುಂಗೇ – **ಹೇಗೆ ಹೋದರು**

ಕುಡಾ (ನಾ) – ಕುಂಟೀಮ್ ಫಾಲೇರ್. ಕುಡಾ ಲಾ – **ಕುಡಾ – ಬಡಿಸು**

ಕುಟಾ (ಕ್ರಿ) – ಲೋವ್ಹೊ, ಸೋನೊ ಕುಟಾಯೇರೊ. ಸೋನೊಕುಟಾ. – **ಬಡಿಸು**

ಕುಣಸ್ (ಪ್ರವಾ) – ಘಣೇಮ್ ಏಕೇನ್ ಪುಚೇರೊ. ಏಮಾ ಕುಣಸ್ ಹಾವ್. **ಯಾವುದು**

ಕುಣಬಿ (ನಾ) – ಕೋರಿಕೋರ್. ಕುಣಬಿ ಶ್ಯಾಣಭ – **ಬಂಜಾರೇತರರು**

ಕುತ್ತ್ (ಕ್ರಿ) – ನಲ್ಡಿನ್ ಆಯೇರೊ. ಮನ್ ಕುತ್ತ್ ಆವ್ ಗೊ – **ಆಪತ್ತು**

ಕುತ್ರಾ (ನಾ) – ಕತರಾ, ಘರೇಮುಂಡಾಗ್ ಪಾಳಮೆಲೆಜಕೊ. ಕಾಳೊಕುತ್ರಾ – **ನಾಯಿ**

ಕುತ್ರಿ (ನಾ) – ಕತರಿ, ಘರೇಮ್ ಮುಂಡಾಗ್ ಬಸೇವಾಳ್. ವೂ ಕುತ್ರಿ ಕಾಟಚ –**ಹೆಣ್ಣು ನಾಯಿ**

ಕುತರಾರ ಪಿಲ್ಲಾ (ನಾ) – ಕತ್ರಿಜಗ್‌ಮೆಲಿಜಕೊ. ಕೂತರಾರ ಪಿಲ್ಲಾ ಅಲ್ಡಾರೋಚ – **ನಾಯಿ ಮರಿ**

ಕುಂವಾರ್ (ಗು.ವಿ) – ವಿಯಾ ವಿಕೊನಿಜಕೊ. ಊ ಅಜಿ ಕುಂವಾರ್ ಛ – **ಅವಿವಾಹಿತೆ**

ಕುಂವಾರೋ (ಗು.ವಿ) – ವಿಯಾ ಓಕೊಂತಿ ಜಕೊ ಛೋರಾ. ಮಾ ಕುಂವಾರೋ ವೇತೋ – **ಅವಿವಾಹಿತ, ತರುಣ**

ಕುವಾರೊ (ಗು.ವಿ) – ಸಡ್ರೊ, ಬೂಸ್ಟ್‌ಆರೊಜಕೊ. ಸಾರಿಕುವಾರೊಚ್ – **ಹಳಸಿದ್ದು**

ಕೂ

ಕೂರ್ಗಿ (ನಾ) – ಜಾರ್‌ಪೇರೇರ್. ಕೂರ್ಗಿತಿ ಬೀಜ ಪೇರ್ – **ಬಿತ್ತುವ ಕೂರ್ಗಿ**

ಕೂರ್ಗಿರನಗ್ಗಾ (ನಾ) – ಬೊವಜನ್ನಾ ಭಾಂದಜಕೊ, ಕೂರ್ಗಿರ ನಗ್ಗಾತಿ ಗಳೋ ಭಾಂದ್ – **ಕೂರ್ಗಿಯ ನೊಗಾ**

ಕೂರ್ಗಿರ ಬಟ್ಲಾ (ನ) – ಜಾರ್ ಪೇರೇನ್ ಬಳಸಜಕೊ. ಕೂರ್ಗಿಬಟ್ಲಾವಾ ಜಾರ್‌ಪೇರ ಚ – **ಕೂರ್ಗಿಯ ಬಟ್ಲಾ**

ಕೂರ್ಗಿರ ತಾಳ್ (ನಾ) – ಕೂರ್ಗಿಸಾರೂಜ್ ರಜಕೊ. ಕೂರ್ಗಿರ ತಾಳೇಪರ್ ಕೊಳ್ಬೀ ಭಾಂದ್ – **ಕೂರ್ಗಿಯ ತಾಳು**

ಕೂರ್ಗಿತಿ ಪೇರ್ (ಕ್ರಿ) – ಪೇರೇನ ಬಳಸಜನ್ನಾ ಕೇರೊ. ಕೂರ್ಗಿತಿ ದಾಣ ಬೊಂಯೇರೊ.– **ಕೂರ್ಗಿಯಿಂದ ಬಿತ್ತುವುದು.**

ಕೂಣ್ (ಪ್ರವಾ) – ಮಾಲಮ್ ಛೆನಿಜೆನ್ ಪುಚೇರೊ. ಕೂಣ್ ಛವ್ಹೊ – **ಯಾರಿವದು**

ಕೂಂಟಿಮಾರ್ (ಕ್ರಿ) – ಹರಗ್, ಖೇತ್ ಸಾಪ್‌ಕರ್. ಕೂಂಟಿಮಾರ್. – **ಕುಂಟಿ ಹೊಡೆ**

